ಅಪರಂಜಿ

ಆಗಸ್ಟ್

1992

ತಿಳಿನಗೆಯ ಕಾರಂಜಿ



* ಪ್ರಕಾಶ್
* ಗೌತಮ
* ನಂದಿನಿ ಕಾಪಡಿ
* ಕೆ. ಎಸ್. ಶ್ರೀಕಂಠಯ್ಯ
* ಸೀ. ಆರ್. ಸತ್ಯ
* ಕಂಭಂ ಕೃಷ್ಣಮೂರ್ತಿ
* ಶಿವು
* [illegible]
* ಪೀಪಿ
* ಅ.ರಾ.ಸೇ.
* ಶೀನೂ

ಬಿಡಿ ಪ್ರತಿ : 2 ರೂ. 50 ಪೈ.



ಸಂಪುಟ ೯ ಆಗಸ್ಟ್ ೧೯೯೨ ಸಂಚಿಕೆ ೧೧

ನಲ್ಲ

"ನಾ

ನಲ್ಲ" ಎಂದವಗೆ

"ನಿಜಕು ನೀವಲ್ಲ ಆವ

ನಲ್ಲ ಶಿವ

ನಲ್ಲ ಮಲ್ಲಿ

ಕಾರ್ಜುನನೆ ಎಲ್ಲ"

ಎಂದವಳ ಮಾತಿನ ಮರ್ಮ ಅಲ್ಲ

ಮ ಪ್ರಭುವೊಬ್ಬನೇ ಬಲ್ಲ

—ಎಸ್. ಪ್ರಕಾಶ್

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :

ಶಿವಕುಮಾರ್

ಚಂದಾ ವಿವರ :

ಬಿಡಿ ಪ್ರತಿ

2 ರೂ. 50 ಪೈ.

ವಾರ್ಷಿಕ ಚಂದಾ

25 ರೂ.

ಆಜೀವ ಚಂದಾ

250 ರೂ.

ವಿಳಾಸ

ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :

ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು

ದೂರವಾಣಿ 342144

ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ ೯ ಆಗಸ್ಟ್ ೧೯೮೨ ಸಂಚಿಕೆ ೧೧

ನತತ್ರರಥಾ ನ ರಥಯೋಗಾ ನ ಪಂಥಾನೋ ಭವಂತಿ.

—ಬೃಹದಾರಣ್ಯಕ.

ಸ್ವಪ್ನಾವಸ್ಥೆಯನ್ನು ಕುರಿತು ಯಾಜ್ಞವಲ್ಕ್ಯರು ಜನಕನಿಗೆ ಹೇಳಿದ ಮಾತು ಇದು.


ಕನಸಿನಲ್ಲಿ ರಥಗಳಿಲ್ಲ, ಕುದುರೆ, ಮಾರ್ಗಗಳು ಯಾವುವೂ ಇರುವುದಿಲ್ಲ. ಆತ್ಮನೇ ಅವನ್ನೆಲ್ಲವನ್ನೂ, ಅವುಗಳನ್ನು ತೋರುವ ಬೆಳಕನ್ನೂ ಹುಟ್ಟಿಸಿಕೊಳ್ಳು ತ್ತಾನೆ.

ಲೋಕದಲ್ಲೂ ಜನನಾಯಕರು ಮಾಡುವುದು ಹಾಗೆಯೇ. ಕೋಣವು ಮರಿ ಹಾಕುತ್ತದೆ ಎಂದೇ ಹೇಳುತ್ತಾರೆ. ಆರಿಸಿ ಬಂದವರು ತಮ್ಮಲ್ಲೇ ಆದ ದಾರಿಗಳನ್ನು ಕಂಡುಕೊಂಡು, ಅಲ್ಲಿ ಹೋಗುವ ರಥ, ಕುದುರೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಅಲ್ಲಿ ಆನಂದ, ಮೋದ, ಪ್ರಮೋದ, ಕೆರೆಕಟ್ಟೆ ಬಾವಿ ನದಿಗಳು ಇರುವುದಿಲ್ಲ. ಅವೆಲ್ಲ ವನ್ನು ಅಂಗೈಯಲ್ಲೇ ಮಾತಿನಲ್ಲೇ ಆಕಾಶವನ್ನು ಮಂಡಿಗೆಯನ್ನು ಹುಟ್ಟಿಸಿ ತೋರಿ ಸುತ್ತಾರೆ ತಿನ್ನಿಸುತ್ತಾರೆ.

ಅವರು ಇಳಿದು ಹೋಗುತ್ತಾರೆ. ಅವರ ಆಶ್ವಾಸನೆಗಳನ್ನು ಮೀರಿಸುವ ಮಾತಿನ ಮಂಡಿಗೆಗಳನ್ನು ಹಿಡಿದು ಮತ್ತೊಬ್ಬರು ಬರುತ್ತಾರೆ. ಬೆಲೆಗಳು ಏರು ತ್ತಲೇ ಇರುತ್ತವೆ, ಶಾಂತಿ ವ್ಯವಸ್ಥೆ ಮತ್ತಷ್ಟು ಹದಗೆಡುತ್ತದೆ, ಭ್ರಷ್ಟಾಚಾರ ಇನ್ನಷ್ಟು ಭದ್ರವಾಗುತ್ತದೆ.

ಸ್ವತಂತ್ರ, ಸಾರ್ವಭೌಮ ಶ್ರೀ ಸಾಮಾನ್ಯನ ತಲೆಯ ಮೇಲೆ ಸಾರ್ವಜನಿಕ ಸಾಲ, ತೆರಿಗೆಗಳ ಹೊರೆ ಮತ್ತಷ್ಟು ಹೆಚ್ಚಿಬಿಡುತ್ತದೆ. ಮತ್ತಷ್ಟು ಕನಸಿನ ಮಾರ್ಗ ಗಳು, ರಥಗಳು, ಡೀಸೆಲ್ ಎಂಜಿನ್ನುಗಳು ಹುಟ್ಟುತ್ತವೆ.

ಹೀಗಾಗುವುದನ್ನೇ ಪ್ರಗತಿ ಎಂದು ಕರೆಯುತ್ತಾರೆ.



ಪ್ರಕಾಶ್

ಕುಣಿಗಲ್ ಪ್ರಕರಣ; ಮಂತ್ರಿಗಳ ಸ್ವ–ಪ್ರೇರಿತ ರಾಜೀನಾಮೆ

—ಸುದ್ದಿ

ವೇದಾಂತದ ಪರಾಕಾಷ್ಠೆ ! ಸ್ವ=ಇತರರು ! !

*　　　*　　　*

ಮಂಗಳೂರು ವಿ. ವಿ. ಯಲ್ಲಿ ಕಾರಂತ ಪೀಠ

—ಸುದ್ದಿ

ಹತ್ತು ಮುಖಗಳನ್ನೂ ಹತ್ತು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೇನೋ ?

*　　　*　　　*

ಶ್ರೀ ಕೆ. ಲಕ್ಕಣ್ಣ ಮೇಯರ್

—ಪತ್ರಿಕೆ

ಅವರ ಲಕ್ಕು !

*　　　*　　　*

ಷೇರು ಹಗರಣದ ಸುಳಿಗೆ ಕ್ರಿಕೆಟ್ ಮಂಡಲಿ

—ಸುದ್ದಿ

ಹರ್ಷದ್ ಮೆಹತ ಗೂಗ್ಲಿ ಹಾಕಿರುವಂತಿದೆ !

*　　　*　　　*

ಮಳೆ ಮೇಲೆ ನಕ್ಷತ್ರ ಪ್ರಭಾವ? ಅಧ್ಯಯನ

—ಶೀರ್ಷಿಕೆ

ಅಧ್ಯಯನದಿಂದ ನಕ್ಷತ್ರದ ಮೇಲೆ ಪ್ರಭಾವ ? ?

*　　*　　*

ಲಾರಿ ಮುಷ್ಕರ ನಿಲ್ಲುವ ಸೂಚನೆ ಇಲ್ಲ

—ಸುದ್ದಿ

ಚಿತ್ರಗುಪ್ತನ ಲೆಡ್ಜರ್‌ಗಳನ್ನು ಅಡ್ಜಸ್ಟ್ ಮಾಡಬೇಕು ಈಗ!

*　　*　　*

ಪಠ್ಯ ಪುಸ್ತಕ; 200 ತಪ್ಪುಗಳು

—ಪತ್ರಿಕೆ

ತಪ್ಪು, ತಪ್ಪು !

*　　*　　*

ಭಾರತೀಯರು ಅಮೆರಿಕದ ಎರಡು ನಗರಗಳಲ್ಲಿ ಮೇಯರುಗಳು

—ಸುದ್ದಿ

ಅವರು ಭಾರತಕ್ಕೆ ಟ್ರಿಪ್ ಬರುತ್ತಾರೇನು ?

*　　*　　*

ರಾಜ್ಯದಲ್ಲಿ ಇಷ್ಟೊಂದು ಡೆಂಟಲ್ ಕಾಲೇಜುಗಳಿವೆಯಲ್ಲ, ಸರಿಯಾಗಿ ನಡೆಯುತ್ತೆ ?

Teething troubles ಇದ್ದೇ ಇರುತ್ತೆ !

*　　*　　*

ಪ್ರಭಾಕರನ್ ಒಪ್ಪಿಸಲು ಶ್ರೀಲಂಕ ಜತೆ ಚರ್ಚೆ

—ಸುದ್ದಿ

ಸರಿ, ವೀರಪ್ಪನ್ ಹಿಡಿದಂತೆಯೇ!

ಪ್ರವೇಶ ಪರೀಕ್ಷೆ

ಗೌತಮ

ಒಬ್ಬೊಬ್ಬರಿಗೆ ಒಂದೊಂದು ವಯಸ್ಸಿನಲ್ಲಿ ಒಂದೊಂದು ತರಹದ ಹುಚ್ಚು ಹಿಡಿಯುತ್ತದ್ದಂತೆ. ನನಗೂ ನಲವತ್ತೈದರ ಈ ಯೌವ್ವನದಲ್ಲಿ ಕನ್ನಡ ಎಂ. ಎ. ಮಾಡುವ ಹುಚ್ಚು ಹಿಡಿಯಿತು.

ಅಂಚೆ ತೆರಪಿನ (ಇದೂ ಒಂಥರ ಥೆರಪಿ !) ಶಿಕ್ಷಣ ಸಂಸ್ಥೆ ನೇರಿದೆ. ಸೀಟೂ ಸಿಕ್ಕಿತು. ನನ್ನ ಮಗನಿಗೂ ಎಲ್. ಕೆ. ಜಿ. ಗೆ ಇಷ್ಟು ಸುಲಭವಾಗಿ ಸೀಟು ಸಿಕ್ಕಿದ್ದಿದ್ದರೆ ಎಷ್ಟು ಚೆನ್ನಿರ‍್ತಿತ್ತು ಅಂತ ದುಃಖಿಸಿದೆ.

'ಥೆರಪಿ' ಅಂಚೆಯ ಮೂಲಕವಾದರೂ 'ಗುರುಕುಲಕ್ಕೆ ನಾವು ಹೋಗಲೇ ಬೇಕು, ಕಾಂಟ್ರಾಕ್ಟ್ ಕ್ಲಾಸ್‌ಗಳಿಗೆ ಅಟೆಂಡ್ ಆಗಲು.

ಕ್ಲಾಸುಗಳೆಲ್ಲ ಮುಗಿದ ಮೇಲೆ ಪಾಸು ಮಾಡುವ ಭರವಸೆ ಮನಸ್ಸಿನಲ್ಲಿ ಕೋಡಿ ಹರಿಯಿತು.

ಅದಕ್ಕೆ ಕಾರಣ (ಕಾರಣಗಳು ಅಲ್ಲ) ಕೊಡ್ತೀನಿ. ಒಂದು ಕ್ಲಾಸಿನಲ್ಲಿ ಉಪನ್ಯಾಸಕರು ಹೇಳಿದರು. ಹಿಂದಿನ ಕಾಲದಲ್ಲಿ ಶಿಕ್ಷಣಾರ್ಥಿಯಾಗಿ ವಿದ್ಯಾರ್ಥಿಗಳು ಗುರುಕುಲಗಳಿಗೇ ಹೋಗುತ್ತಿದ್ದರು. ಆ ಗುರುಕುಲಗಳೋ, ತುಂಬ ಹೆಸರು ವಾಸಿಯಾಗಿರುತ್ತಿದ್ದವು.

ಗುರುಕುಲಕ್ಕೆ ಪ್ರವೇಶ ದೊರಕಿಸಿಕೊಳ್ಳಲು ಈಗ ಏನೇನೋ ಮಾರ್ಗಗಳಿವೆ. ಆದರೆ, ಅಂದಕಾಲತ್ತಿಲೆ, ಆ ವಿಶ್ವವಿದ್ಯಾನಿಲಯದ ದ್ವಾರಪಾಲಕರು ವಿದ್ಯಾರ್ಥಿಗೆ ಪ್ರಶ್ನೆ ಕೇಳುತ್ತಿದ್ದರಂತೆ. ಅವನ ಪ್ರಶ್ನೆಗಳಿಗೆ ಉತ್ತರ ನೀಡಿದರೆ ಸಾಕಾಗಿತ್ತಂತೆ, ವಿದ್ಯಾರ್ಥಿಗೆ ಪ್ರವೇಶ ದೊರಕುತ್ತಿತ್ತಂತೆ. ಅಂದರೆ, ಆ ದ್ವಾರಪಾಲಕರು ಇನ್ನೆಂಥಹ ವಿದ್ವಾಂಸರಿದ್ದಿರಬಹುದು !

ನನಗೂ ಹಾಗೇ ಆಯಿತು. ಕಾಂಟ್ರಾಕ್ಟ್ ಕ್ಲಾಸಸ್ ಅಟೆಂಡ್ ಮಾಡಲು, ಅಂದರೆ, ರೂಮಿನಲ್ಲಿ ಇಳಿದುಕೊಳ್ಳಲು ಐಡೆಂಟಿಟಿ ಕಾರ್ಡ್ ತೆಗೆದುಕೊಂಡು ಹೋಗಬೇಕಾಗಿತ್ತು. ಸರಸ್ವತಿಯ ಮಡಿಲಲ್ಲಿ ವಿದ್ಯೆಯ ಬಟ್ಟ ಹೊತ್ತು, ಹಕ್ಕಿಗಳಂತೆ

ಹಾರುತ್ತಾ, ಕನಸುಗಳನ್ನು ಕಾಣುತ್ತ ಅದನ್ನು ತೆಗೆದುಕೊಂಡು ಹೋಗುವುದನ್ನು ಮರೆತುಬಿಟ್ಟೆ. ಅಲ್ಲಿ ರಸೀತಿ ಬರೆಯುವ ಗುಮಾಸ್ತ ಕೇಳಿದಾಗಲೇ ಅದು ನೆನಪಿಗೆ ಬಂದದ್ದು.

ಅಂದ ಕಾಲದ ದ್ವಾರಪಾಲಕನಿಗಿಂತಲೂ ಇಂದಿನ ಈ ಗುಮಾಸ್ತಾ...?! 'ಸಾರ್, ಮರೆತು ಹೋಯಿತು" ರಿಜಿಸ್ಟರ್ ನಂಬರ್ ಬೇಕಾದರೆ ಕೊಡ್ತೀನಿ' ಅಂತ ಕೇಳಿಕೊಂಡೆ. ನನ್ನ ಬೇಡಿಕೆಯನ್ನು ಕೇಳಿ, ಮೇಲಿನಿಂದ ಕೆಳಗಿನವರೆಗೂ ನನ್ನನ್ನ ನೋಡಿದ.

ಏನು ಹೇಳ್ತಾನೋ ಅಂತ ಬಕಪಕ್ಷಿಯಂತೆ ಅಂಜುತ್ತಾ ಆವನ ಮುಂದೆ ನಿಂತೆ. ಇದ್ದಕ್ಕಿದ್ದಂತೆ,

'ಫಸ್ಟ್ ಪೇಪರ್ ಯಾವುದ್ರೀ ನಿಮಗೇ ?' ಅಂದ.

'ನಾಗಚಂದ್ರ' ಅಂದೆ.

ರಸೀತಿ ಬರೆದೇ ಬಿಟ್ಟಿದ್ದ.

ಒಪ್ಪಿಗೆ

ಬೇಸಿಗೆ ಬೇಗೆ ತಡೆಯಲಾರದೆ
ಮಾಡಿದವು ಮಕ್ಕಳು ತಗಾದೆ
ಅಪ್ಪ ತಂದನು ಫ್ಯಾನ್ ಮೋರಿ ಶಕ್ತಿ
ಅಪ್ರೂವ್ ಮಾಡಲಿಲ್ಲ ವಿದ್ಯುಚ್ಛಕ್ತಿ

ಮುಂದಗೆರೆ ಸೋಮು

ಪ್ರಾಯಸ್ಸಂಧಿ

ಎಸ್ ಪ್ರಕಾಶ್

ವಿಭಕ್ತಿಯಲಿ ಭಕ್ತಿಯನಿಟ್ಟು
ಪ್ರತ್ಯಯಕ್ಕೆ ಬಾರದ ಹಾಗೆ ವ್ಯತ್ಯಯ
ಬೆಳೆಸಿದ ಪಂಡಿತರ ಪುತ್ರ
ಸಮಾಸದಲಿ ಆಸಕ್ತ

ಸಂಧಿ ಬೆಳೆಸಿದ ಸಂಧಿ–
ಸಿದ ಸಮಾಗಮ ಚತುರೆಯೊಡನೆ
ಒಡನೆ ನುಡಿದ ತಾಯಿ ತಂದೆಯರೊಡನೆ

ನೀವುಗಳೆ ಲೋಪ, ಇವಳೆ ಆಗಮ
ಸಂಧಿಗಳೆನ್ನ ಬಾಳ ವ್ಯಾಕರಣಕ್ಕೆ' ಎಂದು

'ನನ್ನಾದೇಶವಿಲ್ಲದೆ ಆದುದಾದರೂ ಹೇಗೆ
ಈ ಆದೇಶ ಸಂಧಿ?"
ಎಂದು ಕೆರಳಿದರು ತಂದೆ

ಅಂತಃಕರಣವ ಬದಿಗಿರಿಸಿ
ಕನಲಿ ಕೇಳಿದರು ಪಂಡಿತರು

'ಕರಣ ಶುದ್ಧವಿಲ್ಲದವಗೆ ವ್ಯಾ
ಕರಣ ಒಲಿದೀತು ಹೇಗೆ?'

ಆಗ ನಕ್ಕವಳು ಆಗಮಿಕೆ
'ಬದಲಾದ ಪಠ್ಯದಲ್ಲಿರುವ ಈ ಹೊಸ ಪಾಠವ
ನೀವು ಕಲತಿಲ್ಲ ಮಾವ
ಇದೆ ವಸಂತ ಸ–
ಮಾಸ ಇದೆ ಪ್ರಾಯಸ್ಸಂಧಿ'
ಎಂದಳಾಕೆ.
ಅಂದೆ ಘೋಷಿಸಿದರು ಪಂಡಿತರು
ತಮ್ಮ ವೃತ್ತಿಗೆ ನಿವೃತ್ತಿ.

ಂಂಂ

9

ಗೋವಾದಲ್ಲಿ ಅಪರಂಜಿ

ನಂದಿನಿ ಕಾಪಡಿ

'ಅಪರಂಜಿ ಸ್ಯಾಂಡಲ್'ಗೆ ಹೆದರಿಕೊಂಡು ಅಪರಂಜಿ ಗೋವಾದಲ್ಲಿರುವ ನನ್ನ ಹತ್ತಿರ ಬಂದದ್ದು ನಿಮಗೆ ಗೊತ್ತೇ ಇರಬೇಕಲ್ವ. ಈ ಮಹಾರಾಯತಿ ನಾಕು ದಿನ ಸುಧಾರಿಸ್ಕೊಳ್ಳೋಕೆ ಬಂದವಳು ಹದಿನೈದು ದಿನಗಳಾದರೂ ವಾಪಸಾಗದಿದ್ದಾಗ ಬೆಂಗಳೂರಿನಲ್ಲಿರುವ ಅಪರಮ್ಮ ಹೆದರ್ಕ್ಕೊಂಡು ತಮ್ಮ ನಾದಿನಿಯ ಮೈದುನನ ಸೊದರ–ಳಿಯ ನಂಜುವನ್ನು ಗೋವಾದಿಂದ ಅಪರಂಜಿನ ಕರೆದ್ಕೊಂಡು ಬಾ ಎಂದು ಕಳಿಸಿಬಿಟ್ಟರು.

ಪಶ್ಚಿಮ ಕರಾವಳಿಯಲ್ಲಿರುವ ಈ ಪ್ರಾಂತದ ಹೆಸರು 'ಗೋಮಂತಕ. ಪರಶುರಾಮ ಸಮುದ್ರಕ್ಕೆ ಬಾಣಬಿಟ್ಟು ನಿರ್ಮಿಸಿದ ಜಾಗ ಎಂತ ಪುರಾಣದಲ್ಲಿ ಹೇಳಿದೆ. ಸುಂದರ ಈ ಜಾಗವನ್ನು ಜನ ಪದೇ ಪದೇ ನೋಡಲು ಬರುವುದು ಆಶ್ಚರ್ಯವೇನಿಲ್ಲ ಬಿಡಿ. ಆದ್ರೆ ದೇವರ ತಾಣ ಸ್ವರ್ಗ ಇದು ಎಂದು ಪರ್ಯಟನೆ ಇಲಾಖೆಯವರು ಪ್ರಚಾರ ಮಾಡೋದು ಬೇರೆ ಬೇರೆ ಕಾರಣಗಳಿಂದ. ದೇವರಿಗೆ ಸಂಸ್ಕೃತದಲ್ಲಿ 'ಸುರ' ಎಂದು ಕರೆಯುತ್ತಾರೆ. ಸುರರಿದ್ದ ಜಾಗದಲ್ಲಿ 'ಸುರೆ' ಇರಬೇಕಲ್ಲ. ನಮ್ಮ ಗೋವಾದ ಬ್ರಾಂಡ್ ಸುರೆಗೆ "ಫೇಣಿ" ಎಂದು ಹೆಸರು. ಗೋಡಂಬಿಹಣ್ಣಿನ ರಸದಿಂದ ಮಾಡುವ ಈ ಸುರೆ ಜಗತ್ಪ್ರಸಿದ್ಧ. ಅಪರಂಜಿಗೂ ಈ ಫೇಣಿಗೂ ಏನು ಸಂಬಂಧ ಅಂತ ಕೇಳಬೇಡಿ. ಗೋವಾದ ವಿವರಣೆ ಕೊಡುತ್ತಾ 'ಫೇಣಿ' ಬಗ್ಗೆ ಹೇಳದಿರುವುದು ಅಪರಾಧ ಅಂತಲೇ ಇಷ್ಟೆಲ್ಲಾ ಪುರಾಣ ಹೇಳ್ದೆ. ಬೇಜಾರು ಮಾಡ್ಕೊಬೇಡಿ.

ನಂಜು ಬರೋತನಕ ಪಾಪ ಅಪರಂಜಿನ ನಾವು ಎಲ್ಲೂ ಸುತ್ತಾಡಿಸಿರಲಿಲ್ಲ. ನಮ್ಮ ಯಜಮಾನರು ಪರ್ಯಟನೆ ಇಲಾಖೆಯವರು ನಡೆಸುವ "ಗೋವಾದರ್ಶನ" ಕಾರ್ಯಕ್ರಮಕ್ಕೆ ಎರಡು ಟಿಕೆಟ್ಟುಗಳನ್ನು ತಂದು ಕೊಟ್ಟು ತಮ್ಮ ಜವಾಬ್ದಾರಿ ಮುಗಿಸಿಕೊಂಡರು.

ಮೊದಲನೆ ದಿನ ದಕ್ಷಿಣ ಗೋವಾದ ದರ್ಶನ, ಪಾಪ ಅಪರಂಜಿ ಮೀನಿನ ವಾಸನೆಗೆ ಅಸಹ್ಯಪಟ್ಟುಕೊತಾಳೇನೋ ಎಂದುಕೊಂಡೇ ಅಕ್ಕಿ ರೊಟ್ಟಿ, ತೆಂಗಿನಕಾಯಿ ಚಟ್ನಿ, ಬಾಳೆಕಾಯಿ ಬೋಂಡಾ ಮಾಡಿ, ಬಾಳೆ ಎಲೇಲಿ ಸುತ್ತಿಕೊಟ್ಟೆ. ಸಂಜೆ ಬರೋ ಹೊತ್ತಿಗೆ ಅಪರಂಜಿ ಸುಸ್ತಾಗಿದ್ದರೂ ನಂಜು ಬಹಳ ಸಂಭ್ರಮದಿದ್ದ.

"ಅಕ್ಕಾ. ನಾಳೆ ಎಲ್ಲಾ ಬೀಚಿನ ಪ್ರೋಗ್ರಾಮಂತೆ. ಅದಕ್ಕೇ ಈ ಡ್ರೆಸ್ಸನ್ನು ತೆಗೆದುಕೊಂಡ" ಎಂದವನೆ ಬಣ್ಣ ಬಣ್ಣದ ದೊಗಲೆ "ಬರ್ಮ್ಯುಡಾಸ್ "ಮತ್ತು "ಐ ಲವ್ ಗೋವಾ" "ಇಟ್ ಈಸ್ ಬೆಟರ್ ಇನ್ ಗೋವಾ" ಎಂದು ಬರೆದಿದ್ದ ಎರಡು ದೊಗಲೆ ಟೀಶರ್ಟುಗಳೇ ಅಲ್ಲದೆ ಒಂದು ದೊಡ್ಡ ಹುಲ್ಲಿನ ಟೋಪಿ (ಅದಕೆ ಇಂಗ್ಲಿಷ್‌ನಲ್ಲಿ ಸ್ಟ್ರಾ ಹ್ಯಾಟ್ ಎನ್ನುತ್ತಾರೆ) ಖರೀದಿಸಿದ್ದ.

ನಾನು ಕಳಿಸಿದ ಅಕ್ಕಿ ರೊಟ್ಟಿ ಚಟ್ನಿ ರುಚಿಯಾಗಿದ್ದರು ಸ್ವಲ್ಪ ಫ್ಯಾಷನ್ನಿಗೋಸ್ಕರ ವಾದರೂ ಬೇರೆ ಏನಾದರೂ ಕೊಡಬಹುದಿತ್ತು. ಎಂದು ನಂಜು ಅಸಮಧಾನಪಟ್ಟು ಕೊಂಡ. ಪಾಪ ಪಡ್ಡೆ ಹುಡುಗ ಯಾಕೆ ಬೇಜಾರು ಮಾಡಿಸಲಿ ಎಂದುಕೊಂಡು ಮಾರನೇ ದಿನ ಬೀಜ್ ಸ್ಯಾಂಡ್‌ವಿಚ್. ಬೇಯಿಸಿದ ಮೊಟ್ಟೆ. ಟೊಮೆಟೋ ಕೆಚಪ್ ಫಿಂಗರ್ ಚಿಪ್ಸ್ ಹೀಗೆ ಮಾಡಿ ಚಿನ್ನಾರಿ ಕಾಗದದಲ್ಲಿ ಪ್ಯಾಕ್ ಮಾಡಿಕೊಟ್ಟೆ. ಅಪರಂಜಿ ತನಗೆ ಮಾತ್ರ ಗೊಜ್ಜವಲಕ್ಕಿ ಸಾಕು ಎಂದು ಬಿಟ್ಟಿದ್ದರಿಂದ ಹಿಂದಿನ ದಿನದ ತರ-ಹವೇ ಬಾಳೆ ಎಲೆಯಲ್ಲಿ ಘಮ ಘಮಿಸುವ ಗೊಜ್ಜವಲಕ್ಕಿ ಕೊಟ್ಟೆ.

ಬೆಳಿಗ್ಗೆ ಹೋದವರು ಸಾಯಂಕಾಲ ಎಂಟು ಗಂಟೆಗೂ ಬರದಿದ್ದಾಗ ಆತಂಕ ವಾಯಿತು. ಬಸ್ಸುಗಳೆಲ್ಲಾ ವಾಪಸು ಬಂದವು ಎಂದು ತಿಳಿಯಿತು. ನನಗೂ ಗಾಬರಿ. ನಂಜು ಬೇಕಾದರು ಫೇಣಿಯ ಆಕರ್ಷಣೆಗೆ ಸಿಕ್ಕಿಕೊಂಡನೆ ? ನಮ್ಮೆಜಮಾನರು ಪೋಲೀಸಿಗೆ ಫೋನುಮಾಡಿ ಕೇಳುತ್ತೇನೆ ಎನ್ನುತ್ತಿದ್ದಹಾಗೆ ನಮ್ಮ ಫೋನ್ ಟ್ರಿಣ ಗುಟ್ಟಿತು.

ಪಣಜಿಯ ಹೊರ ಭಾಗದಲ್ಲಿರುವ ಪಂಚತಾರಾ ಹೋಟೆಲ್ "ಸಿದಾದ್-ದ ಗೋವಾ"ದಿಂದ ಕರೆಬಂತು. (ಪೋರ್ಚುಗೀಸ್ ಭಾಷೆಯ ಈ ಹೆಸರಿನ ಉಚ್ಚಾರಣೆ ನಮ್ಮ ಜನಕ್ಕೆ ಬರದೆ ಅದಕ್ಕೆ "ಸಿದ್ಧಾರ್ಥ್ ಹೋಟಲ್" ಎನ್ನುವುದೂ ಉಂಟು).

ನಮ್ಮಂತಹ ಹುಲುಮಾನವರಿಗೆ ಪಂಚತಾರಾ ಹೊಟೇಹನಿಂದ ಕರೆ ಎಂದ ಮೇಲೆ ಆಶ್ಚರ್ಯವೇ. ಆ ಕಡೆಯಿಂದ ನಂಜುವಿನ ಕರೆ. "ಅಕ್ಕಾ ಇವತ್ತು ಸಾಯಂ ಕಾಲ ಸೂರ್ಯಾಸ್ತ ಸಮಯಕ್ಕೆ ಕಲಂಗ್ಯೂಟ್ ಬೀಚಿಗೆ ಹೋಗಿದ್ವಿ ಅಪರಂಜಿ ಅಲೆ ಗಳ ಹತ್ತಿರ ಖುಷಿಯಾಗಿ ಓಡಾಡುತ್ತಿದ್ದಳು. ಅಲ್ಲಿಗೆ ಫ್ರೆಂಚ್ ಸಿನಿಮಾ ಜನ ಶೂಟಿಂಗಿಗೆ ಬಂದಿದ್ದರು. ಪುಸ ಪುಸ ಮಾತಾಡಿಕೊಂಡು ಅಪರಂಜಿಯ ಫೋಟೋ ಬೇಕಾದಷ್ಟು ತೆಗೆದುಕೊಂಡರು. ಅವಳ ಕೊಂಬಿನ ಬಳೆಗಳು, ಕಾಲಿನ ಚೈನು, ಬಣ್ಣದ ಮಣಿಗಳ ಸರಗಳು, ಬಣ್ಣದ ಕಿರಿಗೆ ಸೀರೆ ನೋಡಿ ಏನೇನೊ ಮಾತಾಡಿಕೊಂಡರು. ಅವರ ಭಾರತೀಯ ಏಜೆಂಟ್ ನನ್ನ ಹತ್ತಿರ ಬಂದು ಎರಡುದಿನದ ಮಟ್ಟಿಗೆ ಅಪರಂಜಿ ಯನ್ನು ಶೂಟಿಂಗ್‌ಗೆ ಕಳುಹಿಸಬೇಕಾಗಿ ಬೇಡಿಕೊಂಡ. ಅಪರಂಜಿ ಒಪ್ಪಿಬಿಟ್ಟಳು.

ನಾವು ನಾಳೆಯಿಂದ ಶೂಟಿಂಗ್ ಪ್ರಾರಂಭ ಮಾಡುತ್ತೇವೆ ಎಂದಿದ್ದಾರೆ. ಅಕ್ಕಾ ನೀನು ಮತ್ತು ಭಾವ ನಾಳೆ ಬೆಳಿಗ್ಗೆ ಇಲ್ಲಿಗೆ ಬಂದುಬಿಡಿ. ನಾವಿಬ್ಬರು ಇಲ್ಲೇ ಇರ್‍ತೀವಿ" ಎಂದು ಬಡಬಡಿಸಿದ.

ಮುಂದಿನ ಎರಡು ದಿನಗಳ ಕಥೆ ನೀವೆಲ್ಲಾ ಊಹಿಸಿರುವ ರೀತಿಯೇ ನಡೆಯಿತು. ಅಪರಂಜಿಯು ಸಂದರ್ಶನ ಮಾಡಲು ಬಂದಾಗ ಇಂಗ್ಲೀಷ್ ಬರದ ಅವಳ ಬಗ್ಗೆ ನಾನೇ ಮಾತಾಡಬೇಕಾಯ್ತು. ಎಳನೀರು ಕಾಯಿಗಳ ಬುಟ್ಟಿ ಹಿಡಿದು ಬೀಚಿನ ತುಂಬಾ ಓಡಾಡುವ ಅವಳ ನಟನೆಯ ಶೈಲಿ ಬಗ್ಗೆ ಪತ್ರಕಾರರು ಹೊಗಳಿದ್ದೂ ಹೊಗಳಿದ್ದೆ ಇದೇನು ಮಹಾ ಎಂದು ನನಗೆ ಒಳಗೊಳಗೇ ಅನಿಯಿದರೂ. ಅವಳಿಗಾಗಿ ಸಂತೋಷ ಪಟ್ಟುಕೊಂಡೆ. ಎರಡು ದಿನಗಳು ನಮಗೂ ಪುಕ್ಕಟೆ ಪಂಚತಾರಾ ಅತಿಥ್ಯ ಚೆನ್ನಾಗಿತ್ತು. ನಂಜುವಂತೂ ಆ ಭಾರತೀಯ ಏಜಂಟಿನ ಬಾಲದಂತೆ ತಿರುಗುತ್ತಿದ್ದ. ಕೂಲಿಂಗ್ ಗ್ಲಾಸ್ ಹಾಕಿಕೊಂಡು ಕೈಯಲ್ಲಿ ಬಿಯರಿನ ಗ್ಲಾಸ್‌ನ್ನು ಹಿಡಿದುಕೊಂಡು ಓಡಾಡಿದ್ದೂ ಓಡಾಡಿದ್ದೇ.

ಶೂಟಿಂಗ್ ಮುಗಿದು ನಾವು ಮನೆಗೆ ಬಂದೆವು. ಆ ಭಾರತೀಯ ಏಜಂಟ್ ನಂಜುವಿನ ಹತ್ತಿರ "ನಾವು ಮತ್ತೆ ಭೇಟಿಯಾಗುತ್ತೇವೆ. ನಿಮ್ಮ ವಿಳಾಸಕೊಡಿ" ಎಂದಿದ್ದನಂತೆ. ನಂಜು "ವ್ಯವಹಾರದ ಬಗ್ಗೆ ಹೇಳಬಹುದು. ಬೇಕಾದಷ್ಟು ದುಡ್ಡು ಕೊಡಬಹುದು" ಎಂದು ಅಪರಂಜಿಗೆ ಹೇಳಿದ. ಆ ದುಡ್ಡಿನ ವ್ಯಯದ ಬಗ್ಗೆ ಭಾರಿ ಯೋಜನೆಗಳನ್ನು ತಯಾರಿಸಿಬಿಟ್ಟಳು ಅಪರಂಜಿ.

ನಾಟ್ಕುದಿನ ಹೀಗೆ ಕಳೆದ ಮೇಲೆ " ಸಿದಾದ್ -ದ- ಗೋವಾ ಹೋಟೆಲಿನ ಬಸ್ಸು ನಮ್ಮ ಮನೆಯ ಮುಂದಿಳಿಯಿತು. ಡ್ರೈವರ್ ಒಂದು ಪಾರ್ಸಲ್‌ನ್ನು ನಮ್ಮ ಹತ್ತಿರ ತಲುಪಿಸಿದ. 'ದುಡ್ಡು ಕಣೇ ಅಪರಂಜಿ. ನಿನ್ನ ಅದೃಷ್ಟವೇ ಅದೃಷ್ಟ" ಎಂದು ನಂಜು ಕುಣಿದಾಡಿದ.

ಪಾರ್ಸಲಿನ ಕಾಗದಗಳು, ರಿಬ್ಬನ್ನುಗಳನ್ನು ಬಿಚ್ಚಿ ನೋಡಿದೆವು ಒಂದು ಚಾಕೋಲೇಟ್ ಪೆಟ್ಟಿಗೆ (ನಮ್ಮ ಭಾರತದಲ್ಲಿ ತಯಾರಾದದ್ದೇ) ಒಂದು ಡಜನ್ ಗೋವಾದ ಮಾನ್ ಕುರಾದ್ ಮಾವಿನ ಹಣ್ಣುಗಳು, ಒಂದು ಕವರಿನಲ್ಲಿ. ಒಂದು ಸುಂದರ ಕಾರ್ಡು-ಚಿತ್ರದ ನಿರ್ದೇಶಕರು ಖುದ್ದಾಗಿ ಸಹಿಮಾಡಿ "ಮೇಸಿ ಮಾದಾಮ್" (ಧನ್ಯವಾದ ಹೇಳೇವ ರೀತಿ) ಎಂದು ಬರೆದಿದ್ದರು !

ಫ್ರಾಂಕುಗಳೂ ಇಲ್ಲ. ರೂಪಾಯಿಗಳೂ ಇಲ್ಲ ! ಒಂದು ನಿಮಿಷ ಪೆಚ್ಚಾದಳು ಅಪರಂಜಿ. ನಂಜುವಿಗೂ ನಿರಾಶೆ ಆದ್ರೆ ಸ್ವಲ್ಪ ಹೊತ್ತಿಗೆ ಸಾವರಿಸಿಕೊಂಡು ಫ್ರೆಂಚ್ ಜನರೊಂದಿಗೆ ತಾನು ಬಿಮ್ಮ್ರೈರ್‌ದಾಸ್ ಟೀ ಶರ್ಟಿನಲ್ಲಿ ಓಡಾಡಿದ್ದರ ಬಗ್ಗೆ ಖುಷಿ ಪಟ್ಟುಕೊಂಡ. ಅಪರಂಜಿಯೂ ಅಷ್ಟೆ ಅಪರನ್ನು ಉದಾರವಾಗಿ ಕ್ಷಮಿಸಿ ಬಿಟ್ಟಳು. "ನಾಲ್ಕು ದಿನ ಮಜಮಾಡಿದ್ದೇ ಒಂತು" ಎಂದುಕೊಂಡಳು. ಅದಕ್ಕೆ ನೋಡಿ ಹೇಳುವುದು, ನಮ್ಮ ಜನರ ಒಳ್ಳೆಗುಣ ಎಂದು.

ಮುಂದಿನ ತಿಂಗಳು ಆ ಫ್ರೆಂಚ್ ಚಿತ್ರ ಪ್ಯಾರಿಸ್ಸಿನಲ್ಲಿ ಬಿಡುಗಡೆಯಾಗುವುದಂತೆ. ಇಲ್ಲೇನಾದರೂ ಬಂದರೆ ನೀವೂ ಮರೆಯದೆ ನೋಡಿ.

ಹಾದಿಯಲ್ಲಿ ಕೇಳಿಸಿದ್ದು

"ನೋಡ್ರಿ ನಿನ್ನೆ ಶಂಕರ ವಿಜಯಕ್ಕೆ ಹೋಗಿದ್ದೆ. ಮಧುರಾಷ್ಟಕ ಎಷ್ಟು ಚೆನ್ನಾಗಿ ಹೇಳಿದ್ರೂ ಅಂತ. ಅಂದ ಹಾಗೆ ಶಂಕರಾಚಾರ್ಯರು 'ಅಹಂ ಬ್ರಹ್ಮೋಸ್ಮಿ' ಅಂತ ಹೇಳಿದ್ರಂತೆ"

"ಹಾಗಂದ್ರೇನ್ರೀ ?"

"ಹಾಗಂದ್ರೇ ನಾನೇ ದೇವರು ಅಂತ. ನಾವೆಲ್ರೂ ದೇವ್ರುಗಳೇ ಅಂತ್ರೀ"

"ಹಾಗ್ಹೇಳಿ. ನನ್ಗೂ ಹಾಗಂತ ಮೊದ್ಲಿಂದ ಗುಮಾನ ಇತ್ತು ರೀ"

ಕುಟುಂಬ ಯೋಜನೆ

ಕೆ. ಎನ್. ಶ್ರೀಕಂಠಯ್ಯ

ಗ್ರಾಮ ದೊಡ್ಡದಾದರೂ ಶಾಲೆ ಮಾತ್ರ ಈಚೆಗೆ ಬಂದಿತ್ತು. ಪ್ರಾರಂಭೋತ್ಸವದ ಚಪ್ಪರ ತೋರಣಗಳು ಇನ್ನೂ ಹಸಿರಾಗೆ ಇದ್ದವು. ಸೀತಾರಾಮಯ್ಯ ಅಲ್ಲಿಯ ಉಪಾಧ್ಯಾಯರು. ಹೆಡ್ಮಾಸ್ಟರೂ ಅವರೇ, ಅಸಿಸ್ಟೆಂಟ್ ಮಾಸ್ಟರೂ ಅವರೇ. ಕಡಗೆ ಘಂಟೆ ಬಾರಿಸುವ ಸಿದ್ದಪ್ಪನೂ ಅವರೇ. ನೇಮಕಗೊಂಡವರು ಇನ್ನೂ ಬರ ಬೇಕಿತ್ತಷ್ಟೆ.

ಆದಿನ ಸೀತಾರಾಮಯ್ಯನವರು ಶಾಲೆಗೆ ಬಂದಾಗ ಅವರ ಇಲಾಖೆಯದ ಲ್ಲದ ಕಾಗದವೊಂದು ಬಂದಿತ್ತು. ಆರೋಗ್ಯ ಮತ್ತು ಕುಟುಂಬ ಯೋಜನೆ ಇಲಾ ಖೆಯ ಕಾಗದ. ಅದೇ ಮಾಹೆ ಇಪ್ಪತ್ತರಿಂದ ಕುಟುಂಬ ಕಲ್ಯಾಣ ಕ್ಯಾಂಪ್ ನಡೆ ಯುತ್ತದೆಂದೂ ಶಾಲೆಯ ಕಟ್ಟಡವನ್ನೂ ಬಿಟ್ಟು ಕೊಟ್ಟು ದಯವಿಟ್ಟು ಸಹಕರಿಸ ಬೇಕೆಂದು ಬರೆಯಲಾಗಿತ್ತು. ಓದಿ ಆ ಕಡೆ ಇಡುವುದರೊಳಗೆ ಒಂದು ಜೀಪು ಬಂದು ಒಬ್ಬ ಅಧಿಕಾರಿ ಸೀತಾರಾಮಯ್ಯನವರೊಡನೆ.

"ನಮಸ್ಕಾರ ಸಾರ್ ನಮ್ಮ ಪತ್ರ ಬಂದಿರಬೇಕು. ಪೇಪರ್‌ಗಳಲ್ಲೂ ಓದಿ ರುತ್ತೀರಿ. ದಯವಿಟ್ಟು ಸಹಕರಿಸಬೇಕು. ಕ್ಯಾಂಪು ಯಶಸ್ವಿ ಆಗಬೇಕಾದರೆ ನಿಮ್ಮ ಸಹಕಾರವೇ ಕಾರಣ. ನಾನು ಶುಕ್ರವಾರ ಬರ್ತೀನಿ. ತಗೋಳಿ ಈ ಓಚರ್‌ಗೆ ರುಜುಮಾಡಿ. ದುಡ್ಡು ಕೊಡ್ತೀನಿ. ಶುಕ್ರವಾರದಿಂದ ನಾನು ಇಲ್ಲೇ ಇರ್ತೀನಿ" ಅಂದರು. ದುಡ್ಡು ಕೊಟ್ಟು ಜೀಪಿನಲ್ಲಿ ಹೊರಟು ಹೋದರು. ಓಚರು ಐದು ನೂರಕ್ಕಿದ್ದು ಮೂನ್ನೂರು ಕೊಟ್ಟಿದ್ದರು. ಅರ್ಥವಾಯಿತು. ಇನ್ನೂರನ್ನ ಒಳಜೇಬಿಗೆ ಸೇರಿಸಿ ನೂರನ್ನ ಹೊರ ಜೇಬಲ್ಲಿಟ್ಟುಕೊಂಡರು. ಹತ್ತಿಪ್ಪತ್ತು ಖರ್ಚುಮಾಡಿ ಸುಣ್ಣಬಣ್ಣ ಮಾಡಿಸಿದರು. ಮರದ ತೋಟದ ಬಾಳೆಕಂದು ಮಾವಿನ ಸೊಪ್ಪು ತರಿಸಿ ಸೊಗಸಾದ ಚಪ್ಪರ ಹಾಕಿಸಿದರು.

ಶುಕ್ರವಾರದಿಂದ ಎರಡು ಜೀಪು ಮೂರು ಲಾರಿ ಬಂದವು. ಹಲವಾರು ಕೆಲಸಗಾರರು ಮೈಕ್ ಸೆಟ್ಟು. ಬೆಂಚುಗಳು ಕಾಟುಗಳು ಕುರ್ಚಿಗಳು ಆಸ್ಪತ್ರೆ ಸಾಮಾನುಗಳು ಅಂಬುಲೆನ್ಸ್‌ಗಳು ನರ್ಸ್‌ಗಳು ಮಿಡ್ ವೈಫ್–ಹೀಗೆ ಜಾತ್ರೆಗೆ

ಸೇರುವಂತೆ ಜನ ಸೇರಿಬಿಟ್ಟರು. ಆ ಗ್ರಾಮದವರು ಹಿಂದೆಂದೂ ಕಾಣದಷ್ಟು ಜನ. ಐಸ್‌ಕ್ರೀಂ ಮಾರುವವರು, ಮಿಠಾಯಿ, ಚಕ್ಲಿ ಬೋಂಡಾ ಅಂಗಡಿ ಒಂದೇ ಎರಡೆ.

ಆ ದಿನವೂ ಬಂದೇ ಬಂತು. ಆಸು ಪಾಸಿನ ಹತ್ತಾರು ಹಳ್ಳಿಗಳಿಂದ ಜನ ಬಂದರು. ಲಾರೀಲಿ ಬಂದರು ಜೀಪಲ್ಲೂ ಬಂದರು ಸೈಕಲ್ಲು ಸ್ಕೂಟರ್ ಹೀಗೆ ಜಾತ್ರೆಗೆ ಸೇರುವಂತೆ ಜನ ಜಮಾಯಿಸಿದರು. ಬ್ಯಾಂಡು ವಾಲಗ ಮೈಕು ಶಬ್ದವೋ ಶಬ್ದ ಗಲಾಟೆಯೋ ಗಲಾಟೆ.

ಆ ದಿನ ಬೆಳಗಿನ ಹತ್ತು ಘಂಟೆಗೆ ಸರಿಯಾಗಿ ಸಮಾರಂಭ ಪ್ರಾರಂಭ ವಾಯಿತು. ಕುರ್ಚಿ ಬೆಂಚು ಭರ್ತಿ ಆಗಿ ಜಂಖಾನ, ಚಾಪೆ ಕಡೆಗೆ ನೆಲದ ಮೇಲೆ ಹೀಗೆ ಜನ ಜಮಾಯಿಸಿದರು. ಡಯಾಸ್ ಹತ್ತಿರ ಭಾರತ ಸರ್ಕಾರದ ಅಧಿಕಾರಿಗಳೋ ಅಥವಾ ಸರ್ಕಾರಕ್ಕೆ ಭಾರವಾದ ಅಧಿಕಾರಿಗಳೋ ಕೈಲಿ ಮೈಕ್ ಹಿಡಿದುಕೊಂಡು ಮಾತಾಡ್ತಾ ಇದಾರೆ. ಅವರ ಭಾಷಣ ಮುಗಿಯುತ್ತಿದ್ದಂತೆ ಆರೋಗ್ಯ ಮಂತ್ರಿಗ ಳಿಂದ ಉದ್ಘಾಟನೆ ಆಗಬೇಕು. ಅಷ್ಟರಲ್ಲಿ ಈ ಕಡೆ ಬಾಗಿಲ ಬಳಿ ಏನೋ ಗಲಾಟೆ. ಏನೋ ಗುಸ ಗುಸ ಆರಂಭ. ಘಳಿಗೆ ಘಳಿಗೆಗೆ ಗಲಾಟೆ ಜೋರಾಯ್ತು.

"ನೀನು ನೋಡ್ದ ಸಿದ್ದಣ್ಣ ಅಲ್ಲಿ ಬರ್ದಿರೋದು"

"ಏನೇಳು"

"ಕಾಮಸುಖ" ಅಂತ ಬರ್ದೀದಾರೆ

"ಅಲ್ಲಂಗೋ. ಇಲ್ನೋಡು "ಸಮುದ್ರ ಗಮನ" ಅಂತ ಬರ್ದೀದಾರೆ.

"ಅಂದ್ರೆ ಏನಾಯ್ತು ಅರ್ಥ, ನಾವು ನಮ್ಮ ಎಂಡ್ರ ಜೊತೆ ಸಂಸಾರ ಮಾಡಿ ದರೆ ಅದು ಕಾಮ ಸುಖ. ಅಂಥೋರು ಸಮುದ್ರ ಗಮನ ಅಂದ್ರೆ ಕೆರೇನೋ ಬಾವೀನೋ ಬೀಳಬೇಕು. ಸತ್ತು ಓಗಬೇಕು" ಅಂತ ಅತು.

"ಯಾಕೆ ನಾವು ಅಳ್ಳಿಯೋರಪ್ಪ ಅದಕ್ಕೆ, ಅವರು ಪಟ್ಟಣದಾಗಿರೋರು ಏನ್ಬೇಕಾರೂ ಮಾಡಬೌದು. ಮಾಡಬಾರದ್ದೂ ಮಾಡಬೌದು.

"ಇದಕ್ಕೇಯಂತೋ ಈ ಕ್ಯಾಂಪು ಈ ಜನ, ಈ ಜಾತ್ರೆ.

"ಏನ್ಲಾ ನೋಡ್ತಿ ಎಳ್ದಾಕ್ಲಾ ಕುರ್ಚಿ ಅಜ್ಜೆಲ್ಲಾ ಬೆಂಕಿ.

ಈ ಗಲಾಟೆಯನ್ನ ದೂರದಿಂದ ನೋಡಿದ ಒಬ್ಬ ಅಧಿಕಾರಿಗಳು ಓಡಿಬಂದರು. ಯಾಕ್ರಪ್ಪಾ, ಏನ್ರಪ್ಪ" ಅಂತ ಕೇಳಿದರು.

"ಏನ್ಸಾಮಿ, ನಿಮಗಾದರೆ ಎಂಡ್ತಿ, ಮಕ್ಕಳು, ಸಂಸಾರ ನಮಗಾದರೆ ಕೆರೆ ಕೊಳ ಬಾವಿ ಅಲ್ವಾ? ಇದಕ್ಕೇನಾ ನೀವ್ಯಂದಿರೋದು.

ಆ ಅಧಿಕಾರಿಗೆ ತಬ್ಬಿಬ್ಬಾಗಿ ಹೋಯಿತು. ಸುಮ್ಮನೆ ನಿಂತುಬಿಟ್ಟ. ಅಷ್ಟರಲ್ಲಿ ಒಬ್ಬ ವಯಸ್ಸಾದವರೊಬ್ಬರು.

"ಅಲ್ಲಾ ಸ್ವಾಮಿ ಬೋರ್ಡ್ ಅಂಗಾ ಬರ್ಸ್ಸೋದು. ಅಳ್ಳಿಯೋರು ಅಂದರೆ ಏನು ಬೇಕಾರೂ ಮಾಡಬವ್ದಾ ಓಗೆ ಹೇಳಿ "ಕಾಮುಸುಖಿ" "ಸಮುದ್ರ ಗಮನ" ವನ್ನ ಅವರಿಗೆ ತೋರಿಸಿದರು. ಆತನಿಗೆ ಏನೂ ಅರ್ಥವಾಗಲಿಲ್ಲ. ಅದೇ ಸಮಯಕ್ಕೆ ಸೀತಾ ರಾಮಯ್ಯನವರು ಕಂಡರು. ಈ ಅಧಿಕಾರಿ ಅವರಿದ್ದ ಬಳಿ ಓಡಿ ಬಂದು.

"ಏನು ಮೇಸ್ಟ್ರೆ ಅನಾಹುತ ಮಾಡಿ ಬಿಟ್ರಲ್ಲ. ನೀರಲ್ಲಿ ಹೋಮ ಮಾಡಿದ ಹಾಗಾಯ್ತಲ್ಲ ನಮ್ಮ ಕಷ್ಟ. ಕಾಮುಸುಖಿ ಸಮುದ್ರಗಮನ ಓಗೆಲ್ಲಾ ಕುಚೇಷ್ಟೆ ಬರಹ ಬರೀರಿ ಅಂತ ನಿಮಗೆ ಯಾರು ಹೇಳಿದ್ದು?

"ಸೀತಾರಾಮಯ್ಯನವರಿಗೆ ಅಗಾಧವಾದ ಕೋಪ. Things done in halves are never done right'' ಗೊತ್ತೇನ್ರಿ" ಅಂದರು.

"ರೀ ನಿಮ್ಮ ಪ್ರತಿಭೆ ಪ್ರದರ್ಶನ ಬೇಕಿಲ್ಲಾರಿ. ತಲೆ ಹರಟೆ ಬರವಣಿಗೆ ಯಾಕೆ ಬರಸಿದ್ರಿ ಅಂದ್ರೆ ಇಲ್ಲದ ಪುರಾಣ ಓತ್ತೀರಿ"

"Half knowledge is dangerous ಅದಾರೋ ಗೊತ್ತೇನಪ್ಪ ನಿನಗೆ"?

"ಪುನ: ಅದೇ ಪ್ರತಿಷ್ಠೆ ನೀವು ಶೇಕ್ಸ್‌ಪಿಯರ್ ಅಂತ ಗೊತ್ತೂರಿ. ಮದುವೇ ಚಪ್ಪರಕ್ಕೆ ಬೆಂಕಿ ಇಟ್ಟು ಬಿಟ್ರಲ್ರೀ"

"You are a set of half baked fellows" ಅಂತ ಗೊಣಗಿಕೊಂಡು "ಬನ್ರೀ ಇಲ್ಲಿ ಅಂತ ಬಾಗಿಲ ಬಳಿಗೆ ಅವರನ್ನ ಕರೆದುಕೊಂಡು ಹೋಗಿ ಅಲ್ಲಿ ಕುಳಿತಿದ್ದವರನ್ನ "ಸ್ವಲ್ಪ ಏಳಿ ಗೌಡ್ರೆ, ಸ್ವಲ್ಪ ಏಳೀಮ್ಮಾ, ಏಳು ಮಗು ಅಂತ ಎಬ್ಬಿಸಿ ಜಾಗ ಖಾಲಿ ಮಾಡಿಸಿದರು.

ಆ ಅಧಿಕಾರಿಯನ್ನ "ಇಲ್ಲಿ ನಿಂತುಕೊಳ್ರಿ" ಅಂತ ಸರಿಯಾಗಿ ನಿಲ್ಲಿಸಿ ಆ ಎರಡೂ ಬಾಗಿಲುಗಳನ್ನ ಹಾಕಿದರು.

"ಈಗ ಓದಿ" ಅಂದರು.

"ಕಾಮ ಸಮುದ್ರ"

"ಸುಖಾಗಮನ"

ಕಾಮಸಮುದ್ರ ಈ ಗ್ರಾಮದ ಹೆಸರು. ಸುಖಾಗಮನ ಈ ಸಮಾರಂಭಕ್ಕೆ ಬರುವರಿಗೆ ಆದರದ ಸ್ವಾಗತ. ಇದು ಬರೆದದ್ದು ತಪ್ಪೇ ಸ್ವಾಮಿ, ಅಪರಾಧ ವೇನಪ್ಪ" ಅಂದರು.

ಆಕ್ಷೇಪಣೆ ಬೆಂಕಿ ಅಂತ ಗಲಾಟೆ ಮಾಡಿದ್ದವರೆಲ್ಲಾ ಪತ್ತೆಯೇ ಇಲ್ಲ. ತಪ್ಪಿನ ಅರಿವಾಗಿ ಜಾಗ ಖಾಲಿ ಮಾಡಿದ್ದರು. ಪಾಪ ಆ ಅಧಿಕಾರಿಯ ಮುಖ ಕಾಸಿನಗಲವಾಗಿ ಹೋಯಿತು.

"ತಪ್ಪಾಯ್ತು ಮೇಷ್ಟ್ರೆ. ಯಾರದ್ದೋ ಮಾತು ನೆಚ್ಚಿಕೊಂಡು ದುರಂಕಾರವಾಗಿ ಮಾತಾಡಿಬಿಟ್ಟೆ" ಅಂತ ಹೇಳಿ ಸೀತಾರಾಮಯ್ಯನವರ ಕಾಲು ಮುಟ್ಟಿ ನಮಸ್ಕಾರ ಮಾಡಿಬಿಟ್ಟರು.

ಕ್ಯಾಂಪು ಸುಸೂತ್ರವಾಗಿ ನಡೆದು ಬಹಳ ಯಶಸ್ಸು ಗಳಿಸಿತೆಂದು ವೇಪರಿ ನವರು ಹೊಗಳಿ ಹಾಡಿದರು.

ಜಂಬದ ಜಲಜಮ್ಮ ತನ್ನ ಪತಿಯೊಂದಿಗೆ ಕಾಲುಚೇನಿನ ತಿರುಪು ಹಾಕಿಸಲು ಚಿನ್ನಾ ಬೆಳ್ಳಿ ಅಂಗಡಿಯೊಳಗೆ ಹೋದಳು. ಬೇಗ ಹಿಂತಿರುಗಿದ ಪತ್ನಿಯನ್ನು ರಾಯರು ಕೇಳಿದರು "ತಿರುಪು ಸಿಕ್ಕಿತೇ ?"

"ಇಲ್ಲ. ಆ ಬಿಂಕದ ಬಂಗಾರಮ್ಮ ಬಂದಿದ್ಲು. 'ನನ್ನ ಮುತ್ತಿನ ಸರಕ್ಕೆ ಚಿನ್ನದ ಪದಕ ಮಾಡಿ ಕೊಡ್ತೀರಾ" ಅಂತ ಅಂಗಡಿಯೋನ್ನ ಕೇಳ್ತಾ ಇದ್ಲು. ತಾನು ಬಿಟ್ಟೇನ್ಯೇ "ವಜ್ರದ ಪದಕ ಕ್ಲೀನ್ ಮಾಡಿಕೊಡ್ತೀರಾ" ಅಂತ ಕೇಳಿ ಬಿಟ್ಟು ಬಂದೆ"

ಪತಿರಾಯರು ಅರ್ಥವಾಗದೇ ತಲೆ ಕೆರೆದರಂತೆ.

ಬಿ. ನಂಜುಂಡಯ್ಯ

17

ಫಾರಿನ್ ರಿಟರ್ನ್ಡ್!

ಸೀ. ಆರ್. ಸತ್ಯ

ಮಾನ್ಯ ಓದುಗರೆ, ಇದು 'ಫಾರಿನ್'ಗೆ ಹೋಗಿ ಬಂದಿದೀನಿ ಅಂತ ಹೇಳ್ಕೊಳ್ಳೋ ಸ್ವಪ್ರಶಂಸಾ ಲೇಖನವಲ್ಲ ಅಂತ ನಾನು ನಿಮಗೆ ಮೊದಲೇ ಮನದಟ್ಟು ಮಾಡ್ತಿದೀನಿ. ಇದು ನನ್ನ ಜೀವನದಲ್ಲಿ ಒಂದು ದೊಡ್ಡ ಆಕಸ್ಮಿಕ ಸಂಗತಿಯಾಗಿ ನಡೆದದ್ದು ಅಷ್ಟೆ.

ನಾನು ಘನ ಸರ್ಕಾರದ ಇಂಜಿನಿಯರಿಂಗ್ ಇಲಾಖೆಯಲ್ಲಿ ಒಬ್ಬ ಇಂಜಿನಿಯರು. (ಈಗಲೂ ಕೆಲಸದಲ್ಲಿದ್ದೀನಿ) ನಮ್ಮ ಪ್ರಾಜೆಕ್ಟ್ ಉದ್ದೇಶಗಳು ಹೀಗಿತ್ತು. ಹಸು, ಮೇಕೆಗಳಿಂದ ಸೊಪ್ಪು ಸದೆಯನ್ನು ತಿನ್ನುವುದನ್ನು ತಡೆಯಲು ಯಾವ ರೀತಿಯಲ್ಲಿ ನಮ್ಮ ದೇಶಕ್ಕೆ ಉಪಯುಕ್ತವಾದ ಬೇಲಿಯನ್ನು ಹಾಕಬೇಕು ? ಆ ಬೇಲಿಯು ಕಬ್ಬಿಣದ್ದೆ? ಮರದ್ದೆ ? ಪ್ಲಾಸ್ಟಿಕ್‌ದೆ ? ಅದರ ಎತ್ತರ ಗಾತ್ರ ರೀತಿ ಹೇಗಿರಬೇಕು ? ಅದು ಚೀಪಾಗಿಯೂ ಇರಬೇಕು, ಗಟ್ಟಿಮುಟ್ಟಾಗಿಯೂ ಇರಬೇಕು. ಅಲ್ಲದೆ ಕಳ್ಳರು ಕದಿಯಬಾರದು. (ಬೇಲಿ ಹಾಕಿದ ಕಂಟ್ರಾಕ್ಟರೂ ನಂತರ ಕದಿಯಬಾರದು).

ಸರಿ ಯಥಾ ಪ್ರಕಾರ ನಮ್ಮ ಬಾಸ್ ಒಂದು ದಿನ ನನ್ನನ್ನು ಕರೆದು, "ನೋಡ್ರೀ ಐದು ವರುಷಗಳಾದರೂ ಈ ಪ್ರಾಜಕ್ಟ್‌ದು ಇನ್ನೂ ಡೆಫಿನಿಶನ್ ಸ್ಟೇಜ್‌ನಲ್ಲಿ ಇಟ್ಕೊಂಡು ಕೂತ್ತಿದ್ದೀರಿ ಹೀಗಿದ್ದರೆ ನಿಮ್ಮ ಬೇಲಿ ಡಿಸೈನ್ ಆಗಿ ನಮ್ಮ ದೇಶದಲ್ಲಿ ಕಟ್ಕೋಕ್ಕೆ ಮುಂಚೆ ಇರೋ ವನರಾಶಿಗಳನ್ನೆಲ್ಲಾ ಆಕಳು ಮೇಕೆಗಳು ತಿಂದು ತೇಗಿರುತ್ತವೆ. ಈಗ ಏನ್ಮಾಡ್ಬೇಕೂ ಅಂತೀರಾ ? ಅಂತ ಗಡುಸಾಗಿಯೇ ಕೇಳಿದರು.

"ಸಾರ್, ನಾವ್ಯಾಕೆ ಈ ಪ್ರಾಜೆಕ್ಟ್‌ಗೆ ಫಾರಿನ್ ಕೊಲಾಬರೇಶನ್ ಮಾಡ್ಬಾರ್‌ದು ? ಅದೂ ಅಮೇರಿಕಾ ಜೊತೆ ? ಅಲ್ಲಿ ಕೊಲೇರಾಡೋ ಮೌಂಟನ್‌ಗೋಟ್ಸು ಇವೆ. ನ್ಯೂ ಜರ್ಸಿ ಹಸುಗಳೂ ಇವೆ. ಅಲ್ಲಿರೋ ಬೇಲಿ ಟೆಕ್ನಾಲಜಿ ನಮಗೆ ಹೊಂದುಕೊಳ್ಳುತ್ತವೆ. ಸ್ವಲ್ಪ ಖರ್ಚಾದರೂ ಪ್ರಾಜಕ್ಟ್ ಬೇಗ ಮುಗಿಯುತ್ತೆ" ಅಂದೆ.

ಜೊತೆಗೆ, "ನೀವೂ ಅಮೇರಿಕಾಗೆ ಹೋಗಿ ಬಂದ ಹಾಗೂ ಆಗುತ್ತೆ" ಅಂತ ಸೇರಿಸಿದೆ. ತಕ್ಷಣವೇ ಪ್ರಾಜಕ್ಟ್ ಅಪ್ರೂವ್ ಆಯ್ತು !

ಒಬ್ಬ ಕೊಲೋಬರೇಟರ್‌ನ ಹುಡುಕೂ ಆಯ್ತು !!

ಆ ಅಮೇರಿಕ ಕಂಪನಿಯವ ನಮ್ಮ ತರಹಾನೆ ? "ತಕ್ಷಣ ನಮ್ಮ ಎಕ್ಸ್‌ಪರ್ಟ್ ಇಂಜಿನಿಯರ್ರು ನಿಮ್ಮ ದೇಶಕ್ಕೆ ಬರ್ತಾರೆ. ಒಂದು ತಿಂಗಳು ಸತತವಾಗಿ ಅಲ್ಲಿ ಇದ್ದು ನಿಮಗೆಲ್ಲಾ ಬೇಕಾದ ವಿಷಯ ಒದಗಿಸಿ ತರಬೇತಿ ಕೊಡ್ತಾರೆ. ಈ ಒಂದು ತಿಂಗಳು ನಿಮ್ಮ ಸಂಬಂಧಪಟ್ಟ ಇಂಜಿನಿಯರ್ರುಗಳು, ಫೀಲ್ಡ್ ಸ್ಟಾಫು, ಹಸು, ಮೇಕೆಗಳನ್ನೆಲ್ಲಾ ಒಂದು ಕಡೆ ಕಲೆ ಹಾಕಬೇಕು; ಜನವರಿ ನಿಮಗೆ ಅನುಕೂಲವೇ?" ಅಂತ ಕೇಳಿದ. ಅದಕ್ಕೆ ನಮ್ಮ ಬಾಸ್ಸು; "ಜನವರಿ ಟು ಮಾರ್ಚ್ ಇಂಪಾಸಿಬಲ್, ಇಲ್ಲಿ ಫೈನಾನ್ಷಿಯಲ್ ಇಯರ್ ಎಂಡಿಂಗು; ಜೊತೆಗೆ ಉತ್ತರಾಯಣ ಪುಣ್ಯ ಕಾಲ, ಗಣರಾಜ್ಯ ದಿನಾಚರಣೆ, ಮಹಾಶಿವರಾತ್ರಿಗಳು ಬೇರೆ ಇವೆ. ಸಾರಿ" ಅಂತ ಮೆಸ್ಸೇಜ್ ಕಳ್ಸಿದ್ರು.

ಅಮೇರಿಕದವ ಮೊಂಡ. "ಹೌ ಎಬೌಟ್ ಏಪ್ರಿಲ್, ಮೇ ಆರ್ ಜೂನ್?" ಅಂತ ಕೇಳಿದ. ಈ ಪ್ರಶ್ನೆಗೆ ನಮ್ಮ ಬಾಸ್ಸು, "ಸಾರಿ ಎಗ್ಗೈನ್, ಅಕೌಂಟ್ಸ್ ಕ್ಲೋಸಿಂಗ್, ಚಾಂದ್ರಮಾನ ಯುಗಾದಿ, ಕುತುಬ್-ಎ-ರಮಜಾನ್ ಅಂಬೇಡ್ಕರ್ ಜಯಂತಿ, ಮಹಾವೀರ ಜಯಂತಿ, ಗುಡ್ ಫ್ರೈಡೇ, ಮೇ ಡೇ and ಬಸವ ಜಯಂತಿ ಪ್ಲಸ್ ಸಮ್ಮರ್ ಹಾಲಿಡೇಸ್ with L T A Facility. ವೆರ್ರಿ ಸಾರಿ" ಅಂತ ಟೆಲಕ್ಸ್ ಮಾಡಿದ್ರು.

ಅದಕ್ಕೆ ಆ ಅಮೇರಿಕದವ "ಗಾಡ್ ಬ್ಲೆಸ್ ಯೂ, ಹೌ ಎಬೌಟ್ ಜೂನ್, ಜುಲೈ ಆಗಸ್ಟ್ ?" ಅಂತ ಮರು ಪ್ರಶ್ನೆ ಹಾಕಿದ.

ನಮ್ಮ ಬಾಸ್ಸು ತಕ್ಷಣವೇ ಫ್ಯಾಕ್ಸ್ ಹೊಡೆದ್ರು, "ರಿಗ್ರೆಟ್ ಎಗ್ಗೈನ್, ಬಕ್ರಿದ್ ಮೊಹ್ರಂ, ಇಂಡಿಪೆಂಡನ್ಸ್ ಡೇ, ವರಸಿದ್ಧಿ ವಿನಾಯಕ ಚತುರ್ಥಿ and ಸ್ಟಾಫ್ ಟ್ರಾನ್ಸ್‌ಫರ್ ಪ್ರಾಬ್ಲಮ್ಸ್, ಜೊತೆಗೆ ನೀರಿನ ಅಭಾವ ಬೇರೆ"

ಇದಕ್ಕೆ ಅಮೇರಿಕ ಇಂದ ಬಂದ ಮರುಪ್ರಶ್ನೆ.

"ಪ್ಲೀಸ್ ಸರ್ ! ಕೆನ್ ಯೂ ಮ್ಯಾನೇಜ್ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ?"

"ರಿಗ್ರೆಟ್ ಎಗ್ಗೈನ್ ಎಂಡ್ ಎಗ್ಗೈನ್. ಈದ್ ಮಿಲಾದ್, ಮಹಾಲಯ ಅಮಾವಾಸ್ಯೆ, ಬ್ಯಾಂಕ್ ಕ್ಲೋಸಿಂಗ್ ಫಾರ್ ಅರ್ಧ ವರ್ಷ, ಗಾಂಧಿ ಜಯಂತಿ, ಮಹಾನವಮಿ ಆಯುಧಪೂಜೆ, ವಿಜಯ ದಶಮಿ. ನರಕ ಚತುರ್ದಶಿ, ಬಲಿ

ಮಾಧ್ಯಮಿ. ಕನ್ನಡ ರಾಜ್ಯೋತ್ಸವ and ಲಾಸ್ಟ್ ಬಟ್ ನಾಟ್ ದಿ ಲೀಸ್ಟ್. ಕ್ರಿಸ್‌ಮಸ್"

ಇದಕ್ಕೆ ಅಮೇರಿಕ ಇಂದ ಉತ್ತರವೇ ಬರಲಿಲ್ಲ!

ನಾನು ಎಷ್ಟಾದರೂ ಕರ್ಮಯೋಗಿ. ನನ್ನ ಬಾಸ್ಸಿಗೆ "ಸಾರ್, ಈ ರಜಗಳ ಹಾವಳಿಯಲ್ಲಿ ನಮ್ಮ ಪ್ರಾಜೆಕ್ಟು ಮುಂದುವರೆಯೋದಿಲ್ಲ. ಇದಕ್ಕೆ ಒಂದೇ ಉಪಾಯ. ಅವರ ಎಕ್ಸ್‌ಪರ್ಟ್ ಇಲ್ಲಿಗೆ ಬರೋ ಬದಲು ನಾವೇ ಅಲ್ಲಿಗೆ ಹೋದರಾಯ್ತು. ನೀವು ಮೊದಲು ಒಂದು ಟ್ರಿಪ್ ಹಾಕಿ ಎಷ್ಟು ದಿವಸ ಟ್ರೈನಿಂಗ್, ಎಲ್ಲಿ ಅಂತ ಫಿಕ್ಸ್ ಮಾಡಿ ಸಾರ್, ಆಮೇಲೆ ಇಲ್ಲಿಂದ ಯಾರನ್ನಾದರೂ ಕಳಿಸಿ" ಅಂತ ಸಲಹೆ ಮಾಡಿದೆ. "ನನ್ನನ್ನು ಕಳಿಸಿದರೆ ಈ ರಜಗಳನ್ನೆಲ್ಲಾ ಮರೆತು ಹೋಗಿ ಬರ್‍ತೀನಿ ಸಾರ್. ರಜಗಳು ಹಾಳಾಯ್ತು ಕೆಲಸ ಮುಖ್ಯ" ಅಂತಲೂ ಸೇರಿಸಿದೆ.

"ರೈಟ್ ಹೋ!" ಅಂತ ಒಪ್ಪೇಬಿಟ್ಟರು ಬಾಸ್ಸು.

ತಕ್ಷಣವೇ ಅವರು ಅಮೇರಿಕಗೆ ಹೋಗಿ ಬಂದು ನನ್ನ ಕರೆದರು.

"ನೋಡಿ, ನಿಮ್ಮ ಅಮೇರಿಕ ಪ್ರೋಗ್ರಾಂ ಫೈನಲೈಸ್ ಮಾಡಿದೀನಿ. ಅಮೇರಿಕದ ಮೇಕೆಗಳನ್ನು ಪರಿಚಯ ಮಾಡಿಕೊಳ್ಳೋಕ್ಕೆ ಒಂದು ವಾರ ಕೊಲೆರಾಡೋನಲ್ಲಿ, ಹಸುಗಳನ್ನು ಪರಿಚಯ ಮಾಡಿಕೊಳ್ಳೋಕ್ಕೆ ಒಂದು ವಾರ ನ್ಯೂಜರ್ಸಿಯಲ್ಲಿ, ಬೇಲಿ ಟೆಕ್ನಾಲಜಿಗೆ ಎರಡು ವಾರ ನ್ಯೂಯರ್ಕ್, ವಾಶಿಂಗ್ಟನ್ ನಲ್ಲಿ ಫಿಕ್ಸ್ ಮಾಡಿದೀನಿ. ಹೋಗ್ಬನ್ನಿ. ಗುಡ್‌ಲಕ್" ಅಂತ ಕೈ ಕುಲಿಕಿದರು.

"ಥ್ಯಾಂಕ್ಯೂ ಸಾರ್!" ಅಂದೆ.

"ಸಾರಿ ಎಬೌಟ್ ಯುವರ್ ಹಾಲಿಡೇಸ್" ಅಂತ ಅಂದರು.

"ಇಟ್ ಇಸ್ ಓಕೇ ಸಾರ್" ಅಂದೆ. ಸರ್ಕಾರದ ಕೆಲಸ ದೇವರ ಕೆಲಸ.

ತಕ್ಷಣವೇ ಅಮೇರಿಕಗೆ ಹೊರಟೆ. ವಾಪಸ್ ಬಂದೂ ಬಂದೆ.

ಈಗ ಅರ್ಥವಾಯ್ತೆ ನಾನು ಫಾರಿನ್ ರಿಟರ್ನ್ಡ್ ಅಂತ ಹೇಗೆ ಅನ್ನಿಸ್ಕೊಂಡೆ ಅಂತ ?.

ಥ್ಯಾಂಕ್ಯೂ ಫಾರ್ ಯುವರ್ ಅಂಡರ್ ಸ್ಟ್ಯಾಂಡಿಗ್.

ಎನ್ ಒ. ಸಿ. ಯ ಒಂದು ಹಗರಣ

ಕಂಭಂ ಕೃಷ್ಣಮೂರ್ತಿ

"ಬಲು ಚೀಪು ಸ್ವಾಮಿ. ಹತ್ತು ಸಾವಿರಕ್ಕೆಲ್ಲಾ ನಿಮಗೆ ಸೈಟು ಯಾರು ಕೊಡ್ತಾರೆ. ಹೇಳಿ. 40×60ರ ಸೈಟು ಜಯನಗರದಲ್ಲಿ ಎಂಟು ಲಕ್ಷಕ್ಕೆ ಕೊಂಡವರಿದ್ದಾರೆ ದೇವ್ರು. ನೀವೇ ನೋಡ್ತಿರಿ ಆಗೋ ಈಗೋ ಅನ್ನೋದರೊಳಗೆ ಈ ಕುಪ್ಪನ ಹಳ್ಳೀನೂ ಬೆಂಗಳೂರು ಬೆಲ್ಟ್‌ನಲ್ಲೇ ಸೇರೋಗತ್ತೆ" ಎಂದು ಸಂಜೀವಪ್ಪ ಹೇಳಿದಾಗ ಗುಂಡಪ್ಪ ಎದುರು ಹೇಳಲಿಲ್ಲ.

ಬೆಂಗಳೂರಿನಿಂದ ನಲ್ವತ್ತು ಕಿಲೋಮೀಟರ್ ದೂರದಲ್ಲಿದ್ದ ಕುಪ್ಪನಹಳ್ಳಿ ಗ್ರಾಮದ ನಿವಾಸಿ ಸಂಜೀವಪ್ಪ. ತನ್ನ ನಾಲ್ಕೆಕರೆ ಜಮೀನನ್ನು ಕನ್‌ವರ್ಟ್ ಮಾಡಿ ಸೈಟುಗಳಾಗಿ ಪರಿವರ್ತಿಸಿ ಮಾರುತ್ತಿದ್ದ. ಗುಂಡಪ್ಪನಿಗೂ ಏನೋ ಆತುರ ತಾನೊಂದು ಸ್ವಂತ ಮನೆ ಮಾಡಿ ತನ್ನ ದಾಯಾದಿ ಶಾಮಯ್ಯನ ಮೂಗು ಮುರೀಬೇಕಂಬೋ ಕಾತುರ. ಸರಿ ಅವರಿವರ ಹತ್ತಿರ ಕೈಸಾಲ ಮಾಡಿದ. ಮಡದಿಯ ಮೈಮೇಲಿದ್ದ ಚೂರುಪಾರು ಚಿನ್ನವನ್ನು ಅಡವಿಟ್ಟು ಸೈಟು ಕೊಂಡುಕೊಂಡ. ಆದರೆ ಬರೀ ಸೈಟಿಟ್ಟುಕೊಂಡು ಏಳು ಮೊಳ ಹಾಕಬೇಕೆ ?

"ಸ್ವಾಮಿ ಆದಷ್ಟು ಜಾಗ್ರತೆ ಕಟ್ಟಡ ಕಟ್ಟಿಸಿಬಿಡಿ. ಇಲ್ದಿದ್ರೆ ಮಹಾ ಅಪಾಯ" ಎಂದು ಸಂಜೀವಪ್ಪ ಹೇಳಿದಾಗ, ನಿವೇಶನದಿಂದ ಯಾವ ಅಪಾಯ ಕಾದಿದೆ ಎಂಬುದು ಗುಂಡಪ್ಪನಿಗೆ ತಿಳಿಯಲಿಲ್ಲ.

"ಯಾಕೆ ಭೂತ ಪ್ರೇತಗಳ ಕಾಟವಿದೆಯೆ ?" ಎಂದು ಗುಂಡಪ್ಪ ಕೇಳಿದಾಗ, "ಅಯ್ಯೋ ಅದೆಲ್ಲಾ ಅಲ್ಲಾ ಸ್ವಾಮಿ. ಯಾವನೋ ತಲೆ ಮಾಸಿದವನು ನಿಮ್ಮ ಸೈಟಿನಲ್ಲಿ ಗುಡಿಸಲು ಹಾಕಿ ಕೂತರೆ ಅವನನ್ನ ಬಿಡಿಸೋಕೆ ನೀವು ಹೆಣಗಾಡಬೇಕಾಗುತ್ತೆ. ಅವನೇನು ಬಡಪೆಟ್ಟಿಗೆ ಬಿಡ್ತಾನೆಯೆ? ಕೋರ್ಟು ಕಛೇರೀಂತ ನೀವು ಅಲೆದಾಡಿ ಅತ್ತೀಕಾಯಿ ಆಗ್ಬೇಕಾಗುತ್ತೆ.

"ಹಾಗಾದ್ರೆ ಏನು ಮಾಡೋದು ಮತ್ತೆ?"

"ನೀವು ಹೂ ಅನ್ನಿ ಸ್ವಾಮಿ. ನನ್ನ ತಮ್ಮನೇ ಇದಾನೆ. ಅವನು ಮೇಸ್ತ್ರಿ ಕೆಲಸ ಮಾಡಿಕೊಂಡಿದಾನೆ. ಚೀಪಾಗಿ ನಿಮಗೆ ಮನೆ ಕಟ್ಟಿಕೊಡ್ತಾನೆ" ಎಂದು ಸಂಜೀವಪ್ಪ ಸಲಹೆ ಕೊಟ್ಟಾಗ, ಗುಂಡಪ್ಪ ಹೌಸಿಂಗ್ ಲೋನ್‌ಗೆ ಅಪ್ಲೈ ಮಾಡಿ ಕೂತ.

ಸಾಲವೂ ಮಂಜೂರಾಗಿ, ಮಂಡಳ ಪಂಚಾಯತಿಯ ಅನುಮತಿಯನ್ನು ಪಡೆದು, ಗ್ರಾಮ ಠಾಣಾ ಸೈಟಿನಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿಯೇ ಬಿಟ್ಟ. ಕಲ್ಲು ಮಣ್ಣು ಇಟ್ಟಿಗೆಗಳ ರಾಶಿಯೇ ಬಂದು ಬಿದ್ದಿತು. ಗುದ್ದಲಿ ಪೂಜೆಯ ದಿನ ಮೂರು ನಾಲ್ಕು ಮಂದಿ ಸ್ಕೂಟರುಗಳಲ್ಲಿ ಬಂದರು. "ಯಾರ್ರೀ ಮನೆ ಕಟ್ಟಿಸ್ತಿರೋದು. ಬಿ.ಡಿ.ಎ. ಪರ್ಮಿಷನಾ ತೆಗೊಂಡಿದ್ದೀರೇನ್ರಿ?" ಎಂದು ಗುದ್ದಲಿ ಹಿಡಿದು ನಿಂತಿದ್ದ ಗುಂಡಪ್ಪನನ್ನು ಕೇಳಿದರು.

"ಇದು ಗ್ರಾಮ ಠಾಣಾ ಸೈಟು ಸ್ವಾಮಿ. ಮಂಡಳ ಪಂಚಾಯಿತಿಯ ಅಪ್ಪಣೆ ಪಡೆದುಕೊಂಡೇ ಕಟ್ಟಡ ಕಟ್ಟಲು ಶುರು ಮಾಡಿದ್ದೇನೆ. ಇದಕ್ಕೂ ಬಿ.ಡಿ.ಎ.ಗೂ ಏನೂ ಸಂಬಂಧವಿಲ್ಲ" ಎಂದು ಅವನು ಹೇಳಿದ.

"ಏನ್ರಿ ನಮಗೇ ಕಾನೂನು ಕಲಿಸೋಕೆ ಬರ್ತೀರೇನ್ರಿ? ನಿಲ್ಲಿಸ್ರಿ ಕೆಲಸಾನ ನಮ್ಮ ಕಛೇರಿಗೆ ಬಂದು ಮೊದ್ಲು ಪರ್ಮಿಷನ್ ತೆಗೊಳ್ಳಿ. ಆ ಮೇಲೆ ಗುದ್ದಲಿ ಹಿಡೀರಿ" ಎಂದು ಗುಂಡಪ್ಪ ಹಿಡಿದಿದ್ದ ಗುದ್ದಲಿಯನ್ನು ಕಸಿದುಕೊಂಡು, ಅತ್ತ ಒಗೆದು, ಅವನನ್ನು ಬೆದರಿಸಿ ಹೊರಟೇ ಹೋದರು.

ಗುಂಡಪ್ಪ ಮಹಾ ಹಟವಾದಿ. ಅವನ ಪೂರ್ವೀಕರು ಹಂಚಿನ ಮನೆ ಸುಬ್ಬರಾಯರು ಹರಯೋಗಿಗಳಾಗಿದ್ದರು. ಅವರ ವಂಶಜನೇ ಆದ ಇವನು ಈ ಯಃಕಶ್ಚಿತ್ ವಿಷಯಕ್ಕೆ ಸೊಪ್ಪು ಹಾಕ್ತಾನೆಯೆ? ಬಿ. ಡಿ. ಎ ತಂಡ ನಿಷ್ಕ್ರಮಿಸಿದ ಮೇಲೆ ಗುದ್ದಲಿ ಪೂಜೆಯನ್ನು ಶಾಸ್ತ್ರೋಕ್ತವಾಗಿ ಮಾಡಿ, ಪಾಯ ತೆಗೆಸಿಯೇ ಬಿಟ್ಟ. ಮೇಸ್ತ್ರಿಯ ಸುಘರ್ದಿನಲ್ಲಿ ಕಟ್ಟಡ ಲಿಂಟಲ್ ಲೇವಲ್‌ವರೆಗೂ ಬಂದೇ ಬಿಟ್ಟಿತು. ಆಗ ಮತ್ತೊಂದು ತಂಡ ಅಲ್ಲಿಗೆ ಬಂದಿತು.

"ಹ್ಯಾಗ್ರಿ ಕಟ್ಟಿದ್ರಿ ಈ ಕಟ್ಟಡಾನ?" ಎಂದು ಆ ತಂಡದವರು ಕೇಳಿದಾಗ, "ಎಲ್ಲಾ ಸಾಲದಲ್ಲೇ ಕಟ್ಟಿದ್ದೀನಿ ಸ್ವಾಮಿ" ಎಂದ ಗುಂಡಪ್ಪ ವಿನಯದಿಂದ. "ಅದಲ್ರೀ, ಎನ್.ಓ.ಸಿಯಿಲ್ಲದೆ ಹ್ಯಾಗ್ರಿ ಕಟ್ಟಿದ್ರಿ. ಇಲ್ಲಿಗೇ ಕನ್‌ಸ್ಟ್ರಕ್ಷನ್ ನಿಲ್ಲಿಸಿ, ನಮ್ಮ ಆಫೀಸಿಗೆ

ಬಂದು ಎನ್. ಒ. ಸಿ. ತೆಗೋಳ್ಳಿ. ಇಲ್ದಿದ್ರೆ ಕಟ್ಟಡಾನ ಡಿಮಾಲಿಶ್ ಮಾಡ್ಬೇಕಾಗುತ್ತೆ ಹುಷಾರ್" ಎಂದು ಹೆದರಿಸಿ ಆ ತಂಡವು ನಿರ್ಗಮಿಸಿತು.

ಎನ್. ಒ. ಸಿ. ಪಡೆಯಲು ಗುಂಡಪ್ಪ ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. "ನಾವ್ಯಾಕ್ರಿ ನೊ ಅಬ್ಜೆಕ್ಷನ್ ಸರ್ಟಿಫಿಕೇಟು ಕೊಡ್ಬೇಕು. ನಿಮ್ಮ ಗ್ರಾಮ ಠಾಣಾ ಸೈಟು ಬಿ. ಡಿ. ಎ. ಜ್ಯೂರಿಸಿ ಡಿಕ್ಷನ್ನಲ್ಲಿ ಎಲ್ರೀ ಬರುತ್ತೆ ?" ಎಂದು ದಬಾಯಿಸಿ, ಕಛೇರಿಯವರು ಕೈ ಒದರಿಕೊಂಡಾಗ, ಗುಂಡಪ್ಪ ಹತಾಶನಾದ. ಬಿ.ಡಿ. ಎ.ನವರು ಎನ್.ಒ.ಸಿ. ಕೊಡೋ ಹಾಗಿಲ್ಲ. ಅದಿಲ್ಲದೆ ಕಟ್ಟಡ ಕಟ್ಟೋ ಹಾಗಿಲ್ಲ. ಇನ್ನು ಮನೆ ಬಾಡಿಗೆಗೆ ಕೊಟ್ಟು, ಅದನ್ನು ಕಟ್ಟಲು ಮಾಡಿದ ಸಾಲಗಳನ್ನು ತೀರಿಸುವ ಬಗೆ ಹೇಗೆ ? ಕಿಂಕರ್ತವ್ಯ ಮೂಢನಾಗಿ ಗುಂಡಪ್ಪ ತಲೆಯ ಮೇಲೆ ಕೈಹೊತ್ತು ಕುಳಿತ.

ಗುಂಡಪ್ಪನೂ ಸರ್ಕಾರಿ ಉದ್ಯೋಗದಲ್ಲಿದ್ದು ಪಳಗಿದವನೆ, ಬಲಿತ ಗುಮಾಸ್ತನಾದ ಅವನಿಗೆ ಕಲಿಸಬೇಕೆ ? ಬಿ. ಡಿ. ಎ. ಕಛೇರಿಯಲ್ಲಿರುವ ದೊಡ್ಡ ಅಧಿಕಾರಿಗಳ ಹೆಸರುಗಳನ್ನು ಪಟ್ಟಿ ಮಾಡಿಟ್ಟುಕೊಂಡ. ಇನ್ನೊಮ್ಮೆ ಆ ತಂಡ ಬಂದು ಎನ್. ಒ. ಸಿ.ಗೆ ಕಾಡಿದಾಗ "ಶಿವಪ್ಪನವರಿಗೆ ವಿಷಯವೆಲ್ಲಾ ಹೇಳಿದೀನಿ ಸ್ವಾಮಿ. ಅವರು ನಿಮ್ಮ ಹತ್ತಿರ ಮಾತನಾಡ್ತಾರೆ" ಎಂದು ಹೇಳಿ ಅವರನ್ನು ಸಾಗಿಹಾಕಿದ. ಮತ್ತೊಮ್ಮೆ ಬಂದ ತಂಡಕ್ಕೆ "ರೇವಣ್ಣನವರು ನಿಮ್ಮ ಅಧ್ಯಕ್ಷರಿಗೆ ಫೋನ್‌ನಲ್ಲಿ ಮಾತನಾಡಿ ಎಲ್ಲಾ ವಿಷಯಾನು ಹೇಳಿದ್ದಾರೆ... ಎಂದು ಹೇಳಿದ. ರೇವಣ್ಣನವರು ಬಿ. ಡಿ. ಎ.ಯಲ್ಲಿ ದೊಡ್ಡ ಅಧಿಕಾರದಲ್ಲಿರುವವರು. ಅವರ ಹೆಸರು ಕೇಳಿಯೇ ಆ ತಂಡ ನಿರ್ಗಮಿಸಿತು.

ಇಷ್ಟರಲ್ಲಿ, ಸೀಲಿಂಗಾಗಿ, ವುಡ್‌ವರ್ಕಾಗಿ, ಸುಣ್ಣ ಬಣ್ಣದಿಂದ ಕಂಗೊಳಿಸಿದ ಮನೆಗೆ ಗೃಹ ಪ್ರವೇಶವೂ ಆಗಿ ಹೋಯಿತು. ಬಿ. ಡಿ. ಎ. ತಂಡಕ್ಕೂ ಕುಪ್ಪನ ಹಳ್ಳಿಗೆ ಪದೇ ಪದೇ ಹೋಗಿ ಬರಲು ಸಾಧ್ಯವೇ ? ಮೂರು ತಿಂಗಳಿಗೋ ಆರು ತಿಂಗಳಿಗೋ ಒಮ್ಮೆ ಆ ತಂಡ ಭೇಟಿ ಕೊಡುತ್ತಿದ್ದುದೇ ಹೆಚ್ಚು. ಅವರು ಬಂದಾಗಲೆಲ್ಲಾ ಗುಂಡಪ್ಪ ಯಾವನಾದರೂ ಒಬ್ಬ ದೊಡ್ಡ ಅಧಿಕಾರಿಯ ಹೆಸರು ಹೇಳಿ, ಅವರ ಮೂಗಿಗೆ ತುಪ್ಪ ಸವರಿ, ಅವರನ್ನು ಸಾಗುಹಾಕಿ, ಕಟ್ಟಡವನ್ನು ನಿರಾತಂಕವಾಗಿ ಮುಗಿಸಿದ್ದ.

ಎಸ್.ಎ.ಸಿ.ಯಿಲ್ಲದೆ ಕಂಪ್ಲೀಟಾಗಿದ್ದ ಕಟ್ಟಡವನ್ನು ನೋಡಿಯೇ ಈ ಬಾರಿ ತನಿಖೆಗೆ ಬಂದ ಬಿ. ಡಿ. ಎ. ತಂಡಕ್ಕೆ ಕೋಪ ಉಕ್ಕಿತು. "ನಾವು ವಾರನ್ ಮಾಡಿದ್ರೂ ನಮ್ಮ ಮಾತಿಗೆ ಬೆಲೆ ಕೊಡದೆ ಕನ್‌ಸ್ಟ್ರಕ್ಷನ್ ಮುಗಿಸೇಬಿಟ್ಟಿದ್ದಾನಲ್ಲಾ ಸಾರ್ ಈ ಸಲ ದಿಮಾಲಿಷನ್ ನೋಟೀಸು ಕೊಟ್ಟು ಈ ಖದೀಮನಿಗೆ ಬುದ್ಧಿ ಕಲಿಸ್ಬೇಕು ಸಾರ್" ಎಂದು ಅವರುಗಳು ಮಾತನಾಡಿಕೊಂಡು ಡಿಮಾಲಿಷನ್ ನೋಟೀಸ್ ಕೈಲಿ ಹಿಡಿದೇ ಆ ಮನೆಯ ಬಾಗಿಲು ತಟ್ಟಿದರು. ಬಾಗಿಲನ್ನು ತೆರೆದ ವ್ಯಕ್ತಿಯನ್ನು ನೋಡಿ ಬೆಪ್ಪಾಗಿ ನಿಂತರು.

ಗುಂಡಪ್ಪ ಹೊಸ ಮನೆಗೆ ಬಾಡಿಗೆಗೆ, ಆ ಪ್ರದೇಶದ ಎಮ್ಮೆಲ್ಲೆ ತಿಮ್ಮೇಗೌಡರೇ ಬಂದಿದ್ದರು. ಬಾಗಿಲನ್ನು ತಟ್ಟಿದ ತಂಡವನ್ನು ನೋಡಿ ಏನೂ ಅರ್ಥವಾಗದೆ "ಯಾರಪ್ಪಾ ನೀವು. ಏನು ಬೇಕು" ಎಂದು ಕೇಳಿದರು. ತಿಮ್ಮೇಗೌಡರು ವಾಸವಾಗಿರುವ ಮನೆಯನ್ನು ಡಿಮಾಲಿಷ್ ಮಾಡಿ ಉಳಿಯುವುದುಂಟೆ. ತಕ್ಷಣವೇ ತಮ್ಮ ಕೈಲಿದ್ದ ನೋಟೀಸನ್ನು ಜೇಬಿನಲ್ಲಿಳಿಬಿಟ್ಟು, "ನಮಸ್ಕಾರ ಸಾರ್. ತಾವು ಈ ಮನೆಗೆ ವಾಸಕ್ಕೆ ಬಂದಿರೋದು ತಿಳಿದು, ತಮ್ಮ ದರ್ಶನ ಮಾಡಲು ಬಂದ್ವಿ ಸಾರ್" ಎಂದು ತಂಡದ ಮುಂದಾಳು ತೊದಲಿದ. ಏನಾದರೂ ಅನಾನುಕೂಲತೆ ಇದ್ರೆ ಹೇಳಿ ಸಾರ್ ನಾವು ಸರಿ ಪಡಿಸ್ತೀವಿ. ಗುಂಡಪ್ಪನವರು, ಈ ಮನೆ ಮಾಲೀಕರು, ನಮಗೆ ಬಹಳ ತಿಳಿದವ್ರು ಸಾರ್" ಎಂದು ಹೇಳಿ ಕೈ ಕಟ್ಟಿ ನಿಂತರು.

"ಗುಂಡಪ್ಪ ಒಳ್ಳೆ ಮನುಷ್ಯ ಅದಾನೆ ಬಿಡ್ರಿ. ಎಲ್ಲಾದಕ್ಕೂ ಅನುಕೂಲ ಮಾಡಿಕೊಟ್ಟಿದಾನೆ. ನೀವು ಕಾಳಜಿ ಮಾಡಬ್ಯಾಡ್ರಿ" ಎಂದು ಹೇಳಿ ತಿಮ್ಮೇಗೌಡರು ಬಾಗಿಲು ಹಾಕಿಕೊಂಡರು. ಈಗ ಗುಂಡಪ್ಪ ತನ್ನ ಮನೆ ಪಕ್ಕದಲ್ಲಿನ ಮತ್ತೊಂದು ಖಾಲಿ ನಿವೇಶನವನ್ನು ಕೊಳ್ಳಲು ತಯಾರಿ ನಡೆಸುತ್ತಿದ್ದಾನೆ. ಎಮ್ಮೆಲ್ಲೆ ತಿಮ್ಮೆಗೌಡರಿರುವಾಗ ಎನ್ ಒ. ಸಿ. ತಾಪತ್ರಯವಿಲ್ಲವಲ್ಲ.

ಡ್ಯಾನೀ ಕೇ

ಶಿವು



ಎಲ್ಲ ರಾಷ್ಟ್ರಗಳ ಮಕ್ಕಳ ಅಭ್ಯುದಯಕ್ಕಾಗಿ ಮೂವತ್ತು ವರುಷಗಳ ಕಾಲ ಸತತವಾಗಿ ದುಡಿದ ಮಹಾನ್ ವ್ಯಕ್ತಿಯೊಬ್ಬನನ್ನು 1983ರ ಮೇ ತಿಂಗಳಲ್ಲಿ ಯೂನಿಸೆಫ್ ಸಂಸ್ಥೆ ಗೌರವಿಸಿತು. ಗುಡ್‌ವಿಲ್ ಅಂಬಾಸೆಡರ್ ಎಕ್ಸ್ಟ್ರಾರ್ಡಿನರಿ (ಅತಿ ಪ್ರಮುಖ ಸದುದ್ದೇಶದ ರಾಯಭಾರಿ) ಎಂಬ ಈ ಪ್ರಶಸ್ತಿಯನ್ನು ವಿಶ್ವಸಂಸ್ಥೆಯಿಂದ ಗಳಿಸಿದ ವ್ಯಕ್ತಿ–ಜನಪ್ರಿಯ ಹಾಸ್ಯ ನಟ ಡ್ಯಾನೀ ಕೇ.

ಮಕ್ಕಳಿಗೂ. ಡ್ಯಾನಿಗೂ ಒದಗಿದ ಈ ನಂಟು ಹೊಸದೇನಲ್ಲ. ಡ್ಯಾನಿಯ ನಟನೆಯ ರೀತಿ ಸ್ವಾಭಾವಿಕವಾಗಿಯೇ ಮಕ್ಕಳ ಮನರಂಜನೆಯತ್ತ ವಾಲಿರುವಂತಹದು. ನಲವತ್ತು ಐವತ್ತರ ದಶಕಗಳಲ್ಲಿ ಡ್ಯಾನೀ ಕೇ ಯ ಚಿತ್ರಗಳನ್ನು ನೋಡಿದವರಾರೂ ಅವನ ನಟನೆಯನ್ನು ಮರೆಯಲಾರರು. ವಕ್ರವಕ್ರವಾಗಿ ಮುಖಮಾಡಿ. ತನಗಾಗಿಯೇ ರಚಿಸಿದ್ದ ತಮಾಷೆ ಹಾಡುಗಳನ್ನ ನಿಮಿಷಕ್ಕೆ ಅರುವತ್ತು ಪದಗಳಂತೆ ಪಟಪಟನೆ ಒದರಿ, ಮೂರು ಬಾರಿ ಲಾಗ ಹಾಕಿ. ಎರಡು ಬಾರಿ ಎದ್ದು ನಿಲ್ಲುವುದು ಡ್ಯಾನೀಯ ಸ್ವಾಭಾವಿಕ ನಟನಾ ಶೈಲಿ. ಮಕ್ಕಳಿಗೆ ಇಂತಹ ನಟನೆ ಬಹು ಅಪ್ಯಾಯಮಾನವಾಗಿ, ಅವರೆಲ್ಲಾ ಚಿತ್ರದುದ್ದಕ್ಕೂ ಬಿದ್ದು ಬಿದ್ದು ನಗುತ್ತಿದ್ದರೆ, ಶ್ರೀಮದ್ಗಾಂಭೀರ್ಯದ ಹಿರಿಯರೂ ಆ ಕ್ಷಣಗಳಲ್ಲಿ ಮಕ್ಕಳಾಗಿ ಹೊಟ್ಟೆ ತುಂಬಾ ನಕ್ಕು, ಚಿತ್ರಮಂದಿರದಿಂದ ಹೊರಬಂದ ನಂತರ ಡ್ಯಾನೀ ಕೇಯ ಬಾಲಿಶ ಹಾಸ್ಯದ ಬಗ್ಗೆ ಸುದೀರ್ಘ ವಿಮರ್ಶೆ ಬಿಗಿಯುತ್ತಿದ್ದುದೂ ಅಂದಿನ ಕಾಲದ ಸಾಮಾನ್ಯ ದೃಶ್ಯ.

ನಾನು ನೋಡಿದ ಡ್ಯಾನೀ ಕೇ ಚಿತ್ರಗಳಲ್ಲಿ, ಚೆನ್ನಾಗಿ ಜ್ಞಾಪಕ ಇರುವ ಚಿತ್ರ ವೆಂದರೆ "ದ ಇನ್ಸ್‌ಪೆಕ್ಟರ್ ಜನರಲ್" ಈ ಚಿತ್ರದಲ್ಲಿ ಡ್ಯಾನೀಯದು ಒಬ್ಬ ಮುಗ್ಧ ಹಳ್ಳಿಯ ಹುಂಬನ ಪಾತ್ರ. ಈ ಹಳ್ಳಿಯ ಮುಖ್ಯ ಭ್ರಷ್ಟ ಅಧಿಕಾರಿಗಳ ಕೈಗೆ ಸಿಕ್ಕು ಅವರಿಂದ ಅನೇಕ ಕಷ್ಟ ಕೋಟಲೆಗಳನ್ನು ಅನುಭವಿಸಿ, ಕೊನೆಗೆ ತನ್ನ ಮುಗ್ಧತೆ, ಪ್ರಾಮಾಣಿಕತೆಗಳ ಶಕ್ತಿಯಿಂದಲೇ ಆ ಊರಿನ ದಂಡಾಧಿಪತಿಯಾಗುವುದು ಈ ಚಿತ್ರದ ಕಥಾವಸ್ತು. ಡ್ಯಾನೀಯ ಹಾವಭಾವಗಳು, ಸರಸರನೆ ಹೇಳುವ ನೃತ್ಯ ಗೀತೆ, ಅನೇಕ ಪಾತ್ರಾಭಿನಯ ಇವೆಲ್ಲಾ ಇಂದಿಗೂ ಮನದಲ್ಲಿ ಅಚ್ಚಳಿಯದಂತೆ ನಿಂತಿವೆ. ಡ್ಯಾನಿಯ ಅಭಿನಯದಲ್ಲಿ ಪ್ರೌಢಭಾವನೆಗಳಿಗೆ ಸ್ಥಾನವಿಲ್ಲ. ನೋಡಿ, ನಕ್ಕು, ಮರೆಯು ವಂತಹಾ ಪಾತ್ರಗಳು. ಒಂದು ರೀತಿಯಲ್ಲಿ ಫಡ್‌ಹೌಸ್ ಪಾತ್ರಗಳಂತೆ ಕ್ಯಾರಿ ಕೇಚರ್‌ಗಳೆಂತಲೂ ಹೇಳಬಹುದು. ಹೀಗಾಗಿ ಡ್ಯಾನಿ ನಟಿಸಿದ ಪಾತ್ರವನ್ನು ನೋಡುವುದಕ್ಕಿಂತ ಡ್ಯಾನೀಯನ್ನು ನೋಡುವುದಕ್ಕೇ ಪ್ರೇಕ್ಷಕರು ಹೋಗುತ್ತಿದ್ದುದು ಅಂದಿನ ವಾಡಿಕೆ.

ನ್ಯೂಯಾರ್ಕಿನ ಬ್ರೂಕ್‌ಲಿನ್‌ನಲ್ಲಿ 1913ರ ಜನವರಿ ಹದಿನೆಂಟರಂದು ಹುಟ್ಟಿದ ಡ್ಯಾನೀಯ ನಿಜವಾದ ಹೆಸರು ಡೇವಿಡ್ ಡ್ಯಾನಿಯಲ್ ಕೊಮಿನ್ ಸ್ಕಿ. ಡ್ಯಾನಿಯ ತಂದೆ ಜೇಕಬ್ ಕೊಮಿನ್‌ಸ್ಕಿ, ತಾಯಿ ಕ್ಲಾರಾ ರಷ್ಯಾದೇಶದಿಂದ ಆಗ ತಾನೇ ಅಮೆರಿಕಕ್ಕೆ ವಲಸೆ ಬಂದವರು. ಹೈಸ್ಕೂಲಿನವರೆಗೂ ಓದಿದ ಡ್ಯಾನೀ ಅಷ್ಟಕ್ಕೇ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಕೆಲಸ ಹುಡುಕಲು ತೊಡಗಿದ. ಸೋಡಾ ಮಾರಾಟದಿಂದ ಹಿಡಿದು ವಿಮಾ ಏಜೆಂಟ್‌ವರೆಗೂ ಎಲ್ಲಾ ಕೆಲಸಗಳ ರುಚಿನೋಡಿ ಕೊನೆಗೆ ನಾಟ್ಯ ರಂಗಕ್ಕೆ ಬಂದು ಸೇರಿದ. 1940ರಲ್ಲಿ ಸಿಲ್ವಿಯಾಳನ್ನು ಮದುವೆ ಯಾಗುವವರೆಗೂ ಡ್ಯಾನಿಯ ನಟನಾ ಯಶಸ್ಸು ಅಷ್ಟಕ್ಕಷ್ಟೇ ಇತ್ತು. ಸಿಲ್ವಿಯಾ ಒಳ್ಳೆಯ ಬರಹಗಾರ್ತಿ. ಹಾಗಾಗಿ ತನ್ನ ಗಂಡನಿಗೆ ಒಳ್ಳೇ ತಮಾಷೆಯಾದ ಸಂಭಾ ಷಣೆಗಳನ್ನು ಬರೆದು ಕೊಡುವುದರ ಜೊತೆಗೆ, ಅವನೊಂದಿಗೆ ಸದಾಕಾಲ ಇದ್ದು ಡ್ಯಾನಿ ತನ್ನ ಕಾರ್ಯಕ್ರಮಗಳನ್ನು ಹರಿತಗೊಳಿಸುವುದರಲ್ಲಿ ಸಹಾಯಕಳಾಗಿದ್ದಳು. ಮದುವೆಯ ನಂತರ, ಡ್ಯಾನೀ ಪಾತ್ರ ವಹಿಸಿದ ಗೀತ ಪ್ರಹಸನ, "ಲೇಡಿ ಇನ್ ದ ಡಾರ್ಕ್" ಇವರಲ್ಲಿ ಡ್ಯಾನೀ ಮೊಟ್ಟ ಮೊದಲ ಬಾರಿಗೆ ಮೂವತ್ತೆಂಟು ಸೆಕೆಂಡು ಗಳಲ್ಲಿ ಐವತ್ತು ಸಂಗೀತ ರಚನಾಕಾರರ ಹೆಸರುಗಳನ್ನು ಪಟಪಟನೆ ಉದುರಿಸಿ ಸಭಿಕ ರನ್ನು ದಂಗು ಬಡಿಸಿದ. ಇದರ ನಂತರ ಡ್ಯಾನೀಗೆ ಯಶಸ್ಸಿನ ಸುರಿಮಳೆ. ಥರ್ಬರನ "ದ ಸೀಕ್ರೆಟ್ ಲೈಫ್ ಆಫ್ ವಾಲ್ಟರ್ ಮಿಟ್ಟಿ"ಯಲ್ಲಿ (ಅಪರಂಜಿ ಜೂನ್ 1982 ನೋಡಿ) ಡ್ಯಾನೀ ಕೇ, ಮುಖ್ಯ ಪಾತ್ರ ವಹಿಸಿ ಅಪಾರ ಜನಪ್ರಿಯತೆಯನ್ನು ಪಡೆದ. ಡ್ಯಾನೀ ನಟಿಸಿದ "ನಾಕ್ ಆನ್ ವುಡ್" "ಮೆರ್ರಿ ಎಂಡ್ರ್ಯೂ" "ಕೋರ್ಟ್ ಜೆಸ್ಟರ್" ಮುಂತಾದ ಚಿತ್ರಗಳು ಡ್ಯಾನೀಗೆ ಕೀರ್ತಿ ಹಾಗೂ ಯಶಸ್ಸನ್ನು ತಂದು ಕೊಟ್ಟವು.

ಐವತ್ತರ ದಶಕದ ಕೊನೆಯಲ್ಲಿ ಡ್ಯಾನೀಗೆ ಹಾಲಿವುಡ್ಡಿನ ಬಣ್ಣದ ಜಗತ್ತಿಗಿಂತ, ಬಡರಾಷ್ಟ್ರಗಳ ಮಕ್ಕಳ ಏಳಿಗಾಗಿ ದುಡಿಯುವುದೇ ಹೆಚ್ಚು ಪ್ರಿಯವಾಯಿತು. ವಿಶ್ವ ಸಂಸ್ಥೆಯ ಅಂಗವಾದ ಯೂನಿಸೆಫ್ ಮೂಲಕ ಡ್ಯಾನೀ ತನ್ನ ಸೇವಾ ಕಾರ್ಯವನ್ನು ಆರಂಭಿಸಿದ. ಅರುವತ್ತರ ದಶಕದಲ್ಲಿ ಡ್ಯಾನೀ ಕೇ ಭಾರತಕ್ಕೂ ಬಂದಿದ್ದ. ಅನೇಕ ಭಾರತದ ಮಕ್ಕಳು ದಾರುಣ ಬಡತನದಲ್ಲಿದ್ದರೂ, ಅವರ ತಂದೆ ತಾಯಿಯರು ಮಕ್ಕಳ ಬಗ್ಗೆ ತೋರುತ್ತಿದ್ದ ಪ್ರೇಮ ಅನುಕಂಪ, ಇದರಿಂದಾಗಿ ಮಕ್ಕಳಿಗೆ ಚಿಕ್ಕಂದಿನಿಂದ ಒದಗುತ್ತಿದ್ದ "ಸೆಕ್ಯೂರಿಟಿ ಇವೆಲ್ಲಾ ಡ್ಯಾನಿಯ ಮನಸ್ಸನ್ನು ಬಹುವಾಗಿ ಆಕರ್ಷಿಸಿದವು. ಆ ಸುಮಾರಿನಲ್ಲಿ ಡ್ಯಾನಿ ರೀಡರ್ಸ್ ಡೈಜೆಸ್ಟ್‌ನಲ್ಲಿ "ಎಲ್ಲ ಐಶ್ವರ್ಯಗಳಿದ್ದರೂ ಚಿಕ್ಕ ವಯಸ್ಸಿನಿಂದ ಸೆಕ್ಯೂರಿಟಿ ಭಾವನೆಯೇ ಇಲ್ಲದ ಅಮೆರಿಕನ್ ಮಕ್ಕಳಿಗಿಂತಲೂ ಈ ಭಾರತದ ಮಕ್ಕಳು ಭಾಗ್ಯಶಾಲಿಗಳು" ಎಂದು ಬರೆದಿದ್ದ.

ಡ್ಯಾನೀ ತನ್ನ 74ನೇ ವಯಸ್ಸಿನಲ್ಲಿ (ಮಾರ್ಚ್ 1987) ಲಾಸ್ ಏಂಜಲೀಸ್‌ನ ತನ್ನ ಮನೆಯಲ್ಲಿ, ಪತ್ನಿ ಸಿಲ್ವಿಯಾ, ಮಗಳು ಡೇನಾ, ಅವರುಗಳ ಆರೈಕೆಯಲ್ಲಿ ನಿಧನ ಹೊಂದಿದ.

ಡ್ಯಾನೀ ಕೇಯ ಹಾಸ್ಯ ಬರೆದು ವಿವರಿಸುವಂತಹದಲ್ಲ. ನೋಡಿ ಅನುಭವಿಸಿ ಆನಂದಿಸುವಂತಹದು. ನಮ್ಮ ಸಂದರ್ಭದಲ್ಲಿ, ಟಿ. ಪಿ. ಕೈಲಾಸಂ, ಕೋಳೀಕೇ ರಂಗಾ ತಿಪ್ಪಾರಳ್ಳಿ, ಬಲ್ಲೂರ ಹಾಡುಗಳನ್ನ ಹಾವ ಭಾವ ಸಹಿತವಾಗಿ ಹಾಡಿ ನಗಿಸುತ್ತಿದ್ದುದು, ಡ್ಯಾನೀ ಕೇಯ ಹಾಸ್ಯಕ್ಕೆ ಸಮೀಪ. ಕನ್ನಡದ ಸಿನಿಮಾದಲ್ಲಾಗಲೀ, ರಂಗಮಂದಿರದಲ್ಲಾಗಲೀ, ಇಂತಹ ಹಾಸ್ಯ ಕಂಡು ಬರದಿರುವುದು ನಿಜಕ್ಕೂ ಕನ್ನಡ ಮಕ್ಕಳ ದೌರ್ಭಾಗ್ಯ. ಒಂದೊಮ್ಮೆ "ಅಜಿಮನೆ ಸುಬ್ಬಮ್ಮನೋರ್ಗೆ ಏಕಾದಶಿ ಉಪವಾಸ" ಕವನವನ್ನು (ರಚನೆ: ಸಿ. ಆರ್. ಸತ್ಯ) ರಾಜಾರಾಂ ಅವರು ಹಾಡಿ ನಗಿಸಿದ ಏಕೈಕ ನಿದರ್ಶನವನ್ನು ಬಿಟ್ಟರೆ ಈ ರೀತಿ ಹಾಸ್ಯಕವನಗಳ ಹಾಡುವಿಕೆ, ಮನರಂಜನಾ ಮಾಧ್ಯಮವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಕನ್ನಡಿಗರಲ್ಲೂ ಇಂತಹ ಹಾಸ್ಯಪ್ರಜ್ಞೆ ಮೂಡಿ. ಕನ್ನಡದ ಡ್ಯಾನೀಯೊಬ್ಬ ಹುಟ್ಟಿ ಬರುವಂತಾಗಲಿ ಎಂದು ಡ್ಯಾನೀ ಕೇಯ ಚೇತನ ಹಾಸ್ಯ ದೇವತೆಗೆ ಶಿಫಾರಸು ಮಾಡಲಿ.

ಹೆಣ್ಣು ನಗೆ

ಚಂಪಾ

ಸ್ಮಿತ, ಸುಸ್ಮಿತ ಇತ್ಯಾದಿ ಹಲವು ರೀತಿಯ ನಗೆ ಈಗಾಗಲೇ ಇದೆಯಲ್ಲ ಇದೇನು ಈ ಹೊಸ ಪ್ರಕಾರ ಎಂದು ಕೇಳಬೇಡಿ. ವಿಶಿಷ್ಟ ಹಾಸ್ಯ ಪತ್ರಿಕೆ 'ಪಂಚ್' ಕದ ಮುಚ್ಚಿರುವಾಗ, ಅಮೇರಿಕಾದ ಇನ್ನೊಂದು ತರಹದ ಹಾಸ್ಯ ಪತ್ರಿಕೆ 'ಮ್ಯಾಡ್' ಜನಕ ಆಲ್‌ಫ್ರೆಡ್ ನ್ಯೂಮನ್ ಇನ್ನಿಲ್ಲದಿರುವಾಗ ಇಂಗ್ಲೆಂಡಿನಲ್ಲಿ ಮಹಿಳೆಯರಿಗಾಗಿಯೇ ಒಂದು ಹಾಸ್ಯ ಪತ್ರಿಕೆ ಪ್ರಾರಂಭವಾಗಿದೆಯಂತೆ. ಇದು ಹೆಣ್ಣು ನಗೆಗಾಗಿ ಮೀಸಲಂತೆ.

ಕನ್ನಡದಲ್ಲಿ ಅಳುವ ಗಂಡಸನ್ನು, ನಗುವ ಹೆಂಗಸನ್ನು ನಂಬಬೇಡಿ ಎನ್ನುವ ಗಾದೆ ಇದ್ದರೂ ಸುನಂದಮ್ಮ, ಭುವನೇಶ್ವರಿ, ಲೀಲಾರವರು ಮುಖ್ಯವಾಗಿ ನಗುತ್ತಿದ್ದಾರೆ ನಮ್ಮನ್ನು ನಗಿಸುತ್ತಿದ್ದಾರೆ. 'ಅಪರಂಜಿ'ಯಲ್ಲಿರುವ ನಗೆಗಾತಿ (ಇದರ ಮುಂದೆ ಅರ್ಕಾವತ್ತು ಬೇಕೇ ಬೇಡವೇ ಎನ್ನುವುದಕ್ಕೆ ಜಿ. ವೆಂಕಟಸುಬ್ಬಯ್ಯನವರನ್ನು ಕೇಳಬೇಕು)ಯರ ಸಂಖ್ಯೆ ನೋಡಿದರೆ, ಗಂಡಸರಿಗೆ ಕೋಟಾ ಮೀಸಲು ಮಾಡಿ ಎಂದು ಸಂಪಾದಕರ ಮೇಲೆ ಹಕ್ಕೊತ್ತಾಯ ತರಬೇಕಾಗಿದೆ. ಆದರೆ ಇಂಗ್ಲೀಷ್‌ನಲ್ಲಿ ಮಹಿಳಾ ವಿನೋದ ಸಾಹಿತಿಗಳ ಸಂಖ್ಯೆ ಕಡಿಮೆ. ಥರ್ಬರ್ ವುಡ್‌ಹೌಸ್, ಆಗ್ಡನ್ ನ್ಯಾಶ್‌ರ ಸಮಕ್ಕೆ ಬರುವ ಮಹಿಳೆಯರಿಲ್ಲ. ಆದ್ದರಿಂದ ಅಲ್ಲಿ ಹೆಣ್ಣು ನಗೆಗೆ ಆ ಪತ್ರಿಕೆ ಈಗ ಬೇಕಾಗಿದೆ.

ಒಂದು ತಮಾಷೆಯ ವಿಷಯ ಕಂಡಾಗ ಹಲ್ಲುಬಿಚ್ಚಿ ನಗುವ ಬದಲು, ಅದರಲ್ಲಿ ತಮಾಷೆ ಹೇಗೆ ಬಂತು ಎಂದು ಗಂಭೀರವಾಗಿ, ಹುಬ್ಬು ಗಂಟುಹಾಕಿಕೊಂಡು, ಹಣೆಯಲ್ಲಿ ನೆರಿಗೆ ಬರಿಸಿಕೊಂಡು ಚಿಂತಿಸುವವರು ಗಂಡು-ಹೆಣ್ಣು ನಗುವ ವಿಧಾನದಲ್ಲಿ ವ್ಯತ್ಯಾಸಗಳನ್ನು ಕಂಡುಕೊಂಡಿದ್ದಾರಂತೆ. ಹೆಂಗಸರಿಗೆ ನಿಧಾನವಾಗಿ ಬೆಳೆಯುವ ಕತೆಯ ರೂಪದ ಹಾಸ್ಯ ಇಷ್ಟ. ಗಂಡಸರಿಗೆ ಬೇಗ 'ಪಂಚ್‌ಲೈನ್' ತಲಪುವ ಹಾಸ್ಯ ಇಷ್ಟಎಂದು ನಿರ್ಧರಿಸಿದ್ದಾರಂತೆ.

ಸಾಧಾರಣ ಮಹಿಳೆಗೆ ತಮಾಷೆ ಇಷ್ಟವಿಲ್ಲ ಎನ್ನುವ ಮಾತಿಗೆ ಹಾಗಾದರೆ ಸಾಧಾರಣ ಮಹಿಳೆ ಸಾಧಾರಣ ಪುರುಷನನ್ನು ಏಕೆ ಮದುವೆ ಆಗುತ್ತಾಳೆ ಎನ್ನುವ ಉತ್ತರದ ಚಟಾಕಿ ಬರುತ್ತದೆ. ಇಂದು ಹಾಸ್ಯಾಭಿಮಾನಗಳಲ್ಲಿ ಹೆಂಗಸರು, ಗಂಡಸರು ಸರಿಸಮಾನವಾಗಿದ್ದಾರೆ. ಕನ್ನಡದಲ್ಲೂ ಹೆಣ್ಣು ನಗೆಯ ಪತ್ರಿಕೆ ಬರಬಹುದು, ಬರಲಿ.

28

ಪಾರದರ್ಶಕ

ಎಸ್. ಪ್ರಕಾಶ್

ಗಾಜಿಗಿಲ್ಲ ನೆರಳು
ಅದು ಪಾರದರ್ಶಕ
ಗೋಡೆ ಗುಂಟು ನೆರಳು
ಅದು ಅಪಾರ ದರ್ಶಕ

ಗಾಜಿನಂತೆ ನಾನು ಕೂಡ
ತಡೆ ಹಿಡಿಯಲಾರೆ ಬೆಳಕನು
ಕಲಿಸಿಕೊಡುವ ಪಾಠ ಕೂಡ
ಹಾದು ಹೋಗುವುದು ನನ್ನನು

ಆದರೂ ಅವರ ಪಾಠ
ನನ್ನ ತಲೆಯ ತಲುಪದು
ಎಂದು ನುಡಿದ ಗುರುಗಳೆಂಥ
ದಪ್ಪಗೋಡೆ, ಅರಿಯೆನು

ಅದಕ್ಕೆ ಫ್ರೇಮಿ ಗಂಟಿ ನಿಂತ
ಗಾಜಿನಂತೆ ಇರುವೆನು
ನಿಂತಲ್ಲಿಯೆ ನಿಲ್ಲುವೆನು
ಇದ್ದಲ್ಲಿಯೆ ಇರುವೆನು

ಆರ್ಥಿಕ ಚಿಂತೆ– ಒಂದು ಒಳನೋಟ

ಪೀಪಿ

'ನಮಸ್ಕಾರ ಇವರೇ, ಈ ದಿನ ನಮಗೆ ಸಂದರ್ಶನ ನೀಡಲು ಒಪ್ಪಿಕೊಂಡಿದಕ್ಕೆ ಧನ್ಯವಾದಗಳು'. 'ನಮಸ್ಕಾರ...ಸಂದರ್ಶನಕ್ಕೆ ಕರೆದದ್ದಕ್ಕೆ ಧನ್ಯವಾದಗಳು. ನನಗೂ ಸಂದರ್ಶನ ನೀಡೋದು ಅಂದ್ರೆ ತುಂಬಾ ಸಂತೋಷ. ಒಮ್ಮೆ ಏನಾಯ್ತೂಂತೀರಿ... 'ಓ ಅದು ನಮಗೆ ಗೊತ್ತು... ಹಿಂದಿನ ಸಂದರ್ಶನದಲ್ಲೇ ಹೇಳಿದ್ರಲ್ಲಾ...ಈಗ ನಾವು ಪ್ರಗತಿ ಪಥದಲ್ಲಿ ಮುಂದುರೀತಿರೋ ವಿಷಯಾನ ನಮ್ಮ ಶ್ರೋತೃಗಳಿಗೆ ಸ್ವಲ್ಪ ತಿಳಿಸ್ಕೊಡ್ತೀರಾ ಅಂತ ನಿಮ್ಮನ್ನ ಕೇಳಬಹುದೇ ?'

'ಬಹಳ ಒಳ್ಳೇ ಪ್ರಶ್ನೆ ಕೇಳಿದ್ರಿ ಇವರೇ...ನಮ್ಮ ಜನ ಈಗೇನಾಗ್ತಾ ಇದೆ ಅನ್ನೋದನ್ನ ಸರ್ಯಾಗಿ ತಿಳ್ಕೋಬೇಕು. ಸರ್ಯಾಗಿ ತಿಳಕೋಬೇಕೂಂದ್ರೆ ಆಗಿ ಹೋಯ್ತು ? ಈ ಥರಾ ಸಂದರ್ಶನಗಳನ್ನ ಪ್ರಸಾರ ಮಾಡ್ತಾ ಇರಬೇಕು. ಸಂದರ್ಶನ ಗಳಲ್ಲಿ ಒಳ್ಳೊಳ್ಳೆ ಪ್ರಶ್ನೆಗಳನ್ನ ನಿಮ್ಮ ಥರಾ ಕೇಳಿ ಒಳ್ಳೊಳ್ಳೆ ಉತ್ತರಗಳನ್ನು ಹೊರ ಡಿಸುತ್ತಾ ಇರಬೇಕೇ ವಿನಃ... ಏನಂತೀರಾ ?'

'ಬಹಳ ಒಳ್ಳೇ ವಿಚಾರ ಹೇಳಿದ್ರಿ, ಧನ್ಯವಾದಗಳು. ಈಗ ಮುಖ್ಯ ವಿಷ ಯಕ್ಕೆ ಬರೋದಾದ್ರೆ....ಪ್ರಗತಿ ಪಥದಲ್ಲಿ ನಮ್ಮ ಸಾಧನೆ....

'ಹಾಂ ! ಈಗ ನಮ್ಮ ನೆಚ್ಚಿನ ನಾಯಕರು ದೇಶದ ಘನತೆ, ಪ್ರತಿಷ್ಠೆ ಮತ್ತು ಅಂತಸ್ತುಗಳನ್ನು ಹೆಚ್ಚಿಸೋದಕ್ಕೆ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದಿದಾರೆ'. ಆದ್ರೆ ಎಲ್ಲಾ ವಸ್ತುಗಳ ಬೆಲೇನೂ ಜಾಸ್ತಿ ಆಗ್ತಿದೆ ಅಂತ ಜನ ಹೇಳ್ತಾರಲ್ಲ.... 'ಎಲ್ಲಾ ವಸ್ತುಗಳು ಅಂದ್ರೆ ಯಾವುದು ? ನಿರ್ದಿಷ್ಟವಾಗಿ ಹೇಳಿದ್ರೆ ಆ ವಸ್ತುವಿನ ಬೆಲೆ ಯಾಕೆ ಜಾಸ್ತಿ ಆಯ್ತು ಅಂತ ಹೇಳಬಹುದು'.

'ಈಗ ಹಾಲಿನ ಬೆಲೇನೇ ತಗೊಳ್ಳಿ....

'ಹಾಲಿನ ಬೆಲೆ ಯಾಕೆ ಜಾಸ್ತಿಯಾಯ್ತು ಅಂದ್ರೆ, ಎಲ್ಲಾ ವಸ್ತುಗಳ ಬೆಲೇನೂ ಜಾಸ್ತಿಯಾಗ್ತಾ ಇರೋವಾಗ ಹಾಲಿನ ಬೆಲೆ ಮಾತ್ರ ಜಾಸ್ತಿ ಅಂತ ಯಾಕೆ ದೋಷಾ ರೋಪಣೆ ಮಾಡಬೇಕೋ ಗೊತ್ತಿಲ್ಲ...

'ಎಲ್ಲಾ ವಸ್ತು ಅಂದ್ರೆ ಯಾವು ಯಾವುದರ ಬೆಲೆ ಜಾಸ್ತಿಯಾಗಿದ್ದರಿಂದ ಹಾಲಿನ ಬೆಲೆ ಜಾಸ್ತಿಯಾಯ್ತು ಸ್ವಲ್ಪ ವಿವರಿಸ್ತೀರಾ ?'

'ಬಹಳ ಒಳ್ಳೆ ಪ್ರಶ್ನೆ ಕೇಳೀದಿರಿ. ಈಗ ನೋಡಿ, ನಮ್ಮ ಆರ್ಥಿಕ ರಚನೆ, ವ್ಯವಸ್ಥೆ ಎಲ್ಲಾ ಮುಕ್ತವಾಗಿ ಜಾಗತಿಕ ಆರ್ಥಿಕ ವ್ಯವಸ್ಥೆ ಜೊತೆ ಹೊಂದಿಕೊಳ್ಳೋ ವಕ್ಕೇ ಪ್ರಯತ್ನಿಸ್ತಿದೆ. ಜಾಗತಿಕವಾಗಿ ಯೋಚನೆ ಮಾಡಿದ್ರೆ ನಮಗೆ ಇದರ ಮರ್ಮ ಅರ್ಥವಾಗುತ್ತೆ. ಡಾಲರ್, ಪೌಂಡ್, ಮಾರ್ಕ್ ಮುಂತಾದ ವಿದೇಶೀ ಹಣಗಳ ವಿನಿಮಯ ಬೆಲೆ ಜಾಸ್ತಿಯಾಗಿದೆ. ಒಪ್ಕೋತೀರಾ ? ಹಾಲಿನ ಬೆಲೆ ಜಾಸ್ತಿಯಾಗಿ ನಮ್ಮ ವ್ಯವಸ್ಥೆ ಜಾಗತಿಕವಾಗ್ತಾ ಇದೆ ಅನ್ನೋ ಸೂಚನೆ ಕೊಡ್ತಾ ಇದೆ. ನಾವು ಸಂತೋಷ ಪಡಬೇಕಾದ ವಿಷಯ....

'ಬೇರೆ ರಾಜ್ಯಗಳಲ್ಲಿ, ಕೆಲವು ರಾಜ್ಯಗಳಲ್ಲಾದ್ರೂ ನಮ್ಮ ರಾಜ್ಯದಲ್ಲಿರೋದ ಕ್ಕಿಂತ ಕಮ್ಮಿ ಬೆಲೆ ಇದೆಯಲ್ಲಾ ?'

'ನಾವು ಈಗಾಗ್ಲೇ ಅಂಥ ರಾಜ್ಯಗಳ ಗಮನಕ್ಕೆ ಈ ವಿಷಯ ತಂದು, ಅವರೂ ಜಾಗತಿಕ ಪ್ರಜ್ಞೆಯಿಂದ ಬೆಲೆ ನಿರ್ಣಯ ಮಾಡಬೇಕು ಅಂತ ಕೇಳಿಕೊಂಡಿದೀವಿ.... ಇಷ್ಟರಲ್ಲೇ ನಾನೇ ಒಂದು ನಿಯೋಗದ ಮುಖಂಡತ್ವ ವಹಿಸಿ, ಇಡೀ ದೇಶದಲ್ಲಿ ಸಂಚಾರ ಕೈಗೊಂಡು ಬೇರೆ ಬೇರೆ ರಾಜ್ಯ ಸರಕಾರಗಳ ಮನವೊಲಿಸಿ ಪ್ರಗತಿ ಪಥದಲ್ಲಿ ಅವರೂ ಹೆಜ್ಜೆ ಇಡೋದಕ್ಕೆ ಬೇಕಾದ ಸಹಕಾರ, ಸಲಹೆ, ಸೂಚನೆಗಳನ್ನು ಕೊಡೊ ಕಾರ್ಯಕ್ರಮ ಹಾಕ್ಕೊಂಡಿದೀನಿ....

'ಬಹಳ ಒಳ್ಳೇದು.... ಆದ್ರೆ ನೀವು ಈಗ ಮೂರು ತಿಂಗಳ ಹಿಂದೆ ಹಾಲಿನ ಬೆಲೆ ಹೆಚ್ಚಿಸಿದಾಗ ಕನಿಷ್ಠ ಪಕ್ಷ ಇನ್ನೊಂದು ವರ್ಷ ಬೆಲೆ ಹೆಚ್ಚಿಸೋದಿಲ್ಲ ಅಂತ ಭರವಸೆ ಕೊಟ್ಟಿದ್ರಲ್ಲ ?'

'ಸ್ಥಿರತೆ ಅಂದರೆ ಪ್ರಗತಿ ವಿರೋಧಿ ವ್ಯವಸ್ಥೆ. ಆಗಿನ ಪರಿಸ್ಥಿತೀಲಿ ಇನ್ನೊಂದು ವರ್ಷದವರೆಗೆ ನಾವು ಹೆಚ್ಚಿನ ಪ್ರಗತಿ ಸಾಧಿಸೋದು ಸಾಧ್ಯವಿಲ್ಲ ಅಂತ ಅನ್ನಿಸಿತ್ತು. ಆದರೆ, ಈಗ ಎಲ್ಲಾ ಬದಲಾಗಿದೆ. ಹೊಸ ನೀತಿ ಜಾರಿಗೆ ಬಂದು ನಮಗೆ ಇದ್ದ ಎಲ್ಲಾ ಅಡೆತಡೆಗಳೂ ನಿವಾರಣೆಯಾಗಿದೆ. ಮೂರೇ ತಿಂಗ ಳಲ್ಲಿ ನಾವು ತೀವ್ರಗತಿಯಲ್ಲಿ ಪ್ರಗತಿ ಸಾಧಿಸೋದು ಸಾಧ್ಯವಾಗಿರೋದ್ರಿಂದ ಹಾಲಿನ ಬೆಲೆ ಮೇಲೇರಿದೆ. ನಮ್ಮ ಆರ್ಥಿಕ ಬೆಳವಣಿಗೆ ಸಾಂಪ್ರದಾಯಿಕ ಶಿಸ್ತಿನಿಂದ....

'ಇದರಿಂದ ಜನಕ್ಕೆ ಕಷ್ಟವಾಗುತ್ತೆ ಅಂತ ಕೆಲವು ವಲಯಗಳಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ ಅಂತ ವರದಿಯಾಗಿದೆ. ನೀವೇನು ಸಮಾಧಾನ ಹೇಳ್ತೀರಿ ?'

'ತಪ್ಪು ಅಭಿಪ್ರಾಯ. ಇದರ ನಿವಾರಣೆಯಾಗಬೇಕು. ಜನಕ್ಕೆ ಇದರಿಂದ ಖಂಡಿತ ತೊಂದರೆ ಇಲ್ಲ. ಹಾಲು ಉತ್ಪಾದಕನಿಗೆ ಹೆಚ್ಚಳವ ಒಂದು ಪಾಲು ಕೊಡ್ತೇವೆ. ಅದರಿಂದ ಅವನು ಒಳ್ಳೆ ಹಿಂಡಿ, ಮೇವು ತಂದು ಹೆಚ್ಚು ಹಾಲು ಉತ್ಪಾದನೆ ಮಾಡ್ತಾನೆ. ಹೆಚ್ಚು ಹಾಲು ಉತ್ಪಾದನೆಯಾದ್ರ ಅದರ ಬೆಲೆ ತನ್ನ ಷ್ಟಿಗೆ ತಾನೇ ಕಮ್ಮಿಯಾಗುತ್ತೆ....ಪಾಪ ಅವರು ಹೇಳ್ತಿದ್ದ ಹಾಗೆ ಎಲ್ಲರೂ ಸಹ ಕರಿಸಬೇಕು'.

'ಇದು ಆರ್ಥಿಕ ಸಿದ್ಧಾಂತ. ಆದರೆ ಹಿಂದೆ ಯಾವಾಗಲಾದರೂ ಇದ್ನ ನಿಜವಾಗಿ ಕಂಡು ಬಂದಿದೆಯ? ಅದೂ ಅಲ್ಲದೆ ಸದ್ಯ:ದ ಆದಾಯದ ಮಟ್ಟ ದಲ್ಲಿ ಹಚ್ಚು ಬೆಲೆ ಹಾಲನ್ನು ಕೊಂಡು ಕೊಳ್ಳೋದಕ್ಕೆ ಎಷ್ಟು ಜನ ಗ್ರಾಹಕರಿಗೆ ಶಕ್ತಿ ಇದೆ?'

'ಬಹಳ ಒಳ್ಳೇ ಪ್ರಶ್ನೆ. ಇಲ್ಲಿ ನಾವು ಹಾಲಿನ ಮತ್ತು ಅದರ ಬೆಲೆಯ ಒಂದು ಮುಖ್ಯ ಗುಣವನ್ನು ಗಮನಿಸಬೇಕು. ಎರಡಕ್ಕೂ ಹಿಗ್ಗಿ ಮುಗ್ಗಿ ಗುಣ ವಿದೆ. Elastic ಹೆಚ್ಚು ಬೆಲೆಯಾದರೆ ಕಡಿಮೆ ಪ್ರಮಾಣದಲ್ಲಿ ಹಾಲನ್ನು ಕೊಂಡು ಹೆಚ್ಚಿನ ಪ್ರಮಾಣದಲ್ಲಿ ನೀರು ಬೆರೆಸಿಕೊಂಡು ಪ್ರಮಾಣವನ್ನು ಒಂದೇ ಸಮನಾಗಿ ಇಟ್ಟಿತಬಹುದು. ಇದು ನಮ್ಮ ಕ್ಷೀರ ಸಂಸ್ಕೃತಿಯ ಮುಖ್ಯ ಗುಣ. ಇನ್ನೊಂದೇನ ಪ್ಪಾಂದ್ರೆ, ಒಂದೊಂದು ದಿನ, ಮಳೆ ಬಂತು ಅಂತಲೋ, ನೀರಿಲ್ಲ ಅಂತಲೋ, ಡೈರಿ ಯಂತ್ರ ಕೆಟ್ಟಿತು ಅನ್ನೋ ತಾಂತ್ರಿಕ ಕಾರಣಕ್ಕೋ ಅಥವಾ ವಿದ್ಯುಚ್ಛಕ್ತಿ ಸರಬ ರಾಜಿನಲ್ಲಿ ಆಗುವ ವ್ಯತ್ಯಯದಿಂದಲೋ ಹಾಲೇ ಸಿಗೋದಿಲ್ಲ, ಆ ದಿನ ಹಾಲಿನ ಬೆಲೆಯ ಪೂರ್ಣ ಹಣ ನಿಮಗೆ ಉಳಿತಾಯವಾಗೋದಿಲ್ಲವೆ? ಬೆಲೆ ಕಮ್ಮಿ ಇದ್ದಾಗ ಇಂಥ ಸಂದರ್ಭಗಳಲ್ಲಿ ನಿಮಗೆ ಉಳೀತಾ ಇದ್ದ ಹಣ ಕಮ್ಮಿ ಇರ್ತಿತ್ತು. ಈಗ ಬೆಲೆ ಜಾಸ್ತಿ ಇರೋದ್ರಿಂದ ಉಳಿತಾಯದ ಪ್ರಮಾಣಾನೂ ಹೆಚ್ಚು. ಜನಗಳಿಗೆ ಅಧಿಕ ಲಾಭ.'

'ಯಾರಾದ್ರೂ ಒಪ್ಪಲೇಬೇಕಾದ ಮಾತು. ಜನಗಳಿಗೆ ಹೆಚ್ಚಿನ ಲಾಭ ಆಗೋ ಹಾಗೆ ಬೇರೆ ಏನಾದ್ರೂ ಕಾರ್ಯಕ್ರಮಗಳನ್ನು ಜಾರಿಗೆ ತರೋ ಯೋಜನೆ ಇದೆಯಾ?'

'ಈಗಿರೋ ಯೋಜನೆಯನ್ನೇ ಇನ್ನೂ ತೀವ್ರವಾಗಿ ಜಾರಿಗೆ ತರ್ತೇವೆ. ತಿಂಗಳಿ ಗೊಮ್ಮೆ ಬೆಲೆ ಹೆಚ್ಚಿಸ್ತಾ ಹೋಗೋ ಯೋಜನೆ ಸಿದ್ಧವಾಗಿದೆ. ಆಮೇಲೆ ಹದಿ ನೈದು ದಿನಕ್ಕೊಮ್ಮೆ. ಈ ವರ್ಷದ ಕೊನೆಯ ಒಳಗೆ ವಾರಕ್ಕೊಮ್ಮೆ. ಯಾಕೇಂದ್ರೆ,

ಜನಗಳಿಗೆ ಲಾಭ ಬೇಗ ಸಿಗಬೇಕು, ಅದನ್ನು ಅವರು ತೀವ್ರವಾಗಿ ಅನುಭವಿಸಬೇಕೂ ಅನ್ನೋದೇ ನಮ್ಮ ಧ್ಯೇಯ'.

'ದಿನಕ್ಕೊಂದು ಸಲ ಬೆಲೆ ಏರಿಸಿದ್ರೆ ಹೇಗೆ ಸಾರ್, ಡೈಲಿ ಲಾಟ್ರೀ ಥರಾ ?'

'ಒಳ್ಳೇ ಯೋಚನೆ. ಭಲೆ ! ನಾನು ಗಮನದಲ್ಲಿಟ್ಟುಕೋತೇನೆ. ಆಂದ್ಹಾಗೇ ಬೆಳಗ್ಗೆ ಒಂದು ಸಲ, ಸಂಜೆಗೊಂದ್ಸಲ ಏರಿಸ್ಬಿಟ್ರೆ ಇನ್ನೂ ಪ್ರಗತಿ ಪರವಾಗುತ್ತೆ. ನಿಮ್ಮ ಸೂಚನೆಗೆ ಧನ್ಯವಾದಗಳು.

'ನಮಸ್ಕಾರ ಇವರೇ. ನಿಮ್ಮ ಅಮೂಲ್ಯವಾದ ಸಲಹೆ. ಸೂಚನೆ, ಸಮಾಧಾನ, ವಿಚಾರಲಹರಿ, ಎಚ್ಚರಿಕೆ–ಎಲ್ಲಾ ನಮ್ಮ ಶ್ರೋತೃಗಳೊಂದಿಗೆ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು'

ಕವಿ ಸ್ಫೂರ್ತಿ

ಮೌನದಿ ಕುಳಿತಲ್ಲಿ ಬರೆಯಲು ಕಾವ್ಯ
ಹೂಡುವಳು ನನ್ನವಳು ವ್ಯಾಜ್ಯ
ಆಗದಿದ್ದರೂ ಬೇಡ ಇನ್ನೋರ್ವ ಪಂಪ
ನಿಲ್ಲ ಬಾರದೇ ಅನುದಿನದ ರಣರಂಪ.

ಮುಂದಗೆರೆ ಸೋಮು

ಪ್ರಶ್ನೆಗಳು ಹಲವು ಉತ್ತರಗಳೇ ಇಲ್ಲ

ಅ.ರಾ.ಸೇ.

ಇಪ್ಪತ್ತನೆಯ ಶತಮಾನವು ಮಾನವ ಕುಲದ ವರ್ತನೆಗೆ ಹೇಸಿ, ಈ ಮನುಕುಲವನ್ನು ತೆಗೆದು ಮುಂದಕ್ಕೆ ಎಸೆಯುತ್ತಿರುವ ಇಂದು.........

ವಾಕ್ಯವನ್ನು ಪೂರೈಸು ಎಂದು ನೀವು ಹೇಳಿದರೆ ನಾನು ಅದಕ್ಕೆ ಸಿದ್ಧನಿಲ್ಲ.

ಇಪ್ಪತ್ತೊಂದನೆಯ ಶತಮಾನದಲ್ಲಿ ಪುಸ್ತಕಗಳೇ ಇರುವುದಿಲ್ಲವಂತೆ. ಈಗ ಇದ್ದು ಏನು ಫಲಕಾರಿಯಾಗಿದೆ ?

ಇಪ್ಪತ್ತೊಂದನೆ ಶತಮಾನದಲ್ಲಿ.........ಕ್ಷಮಿಸಿ. ಯಾವ ಇಪ್ಪತ್ತೊಂದನೆಯ ಶತಮಾನ ? ಯಾರೋ. ಯಾರೋ ಏನು, ನಮ್ಮನ್ನು ಗುಲಾಮಗಿರಿಗೆ ಕೆಳತುಳಿದವರು ಹಾಕುವ ಲೆಕ್ಕಾಚಾರವನ್ನು ನಾವು ಒಪ್ಪಿಕೊಂಡಿರುವುದರಿಂದ ಈ ದುರ್ಗತಿ ನಮಗೆ ಬಂದಿತಲ್ಲವೇ ? ಆದ್ದರಿಂದ ಯಾರೋ ಬರೆದದ್ದನ್ನು ಒಪ್ಪಿಕೊಂಡು ಕಣ್ಣು ಮುಚ್ಚಿರುವ ನಮಗೆ ಏನನ್ನು ಹೇಳಲು ಹಕ್ಕಿದೆ ?

ಪುಸ್ತಕಗಳಾಗಲೀ, ಏನನ್ನೇ ಆಗಲಿ ನಮ್ಮ ಪದವೀಧರರಲ್ಲಿ ಬಹು ಮಂದಿ ಓದುತ್ತಿಲ್ಲ. ಓದಿದರೂ ಅರ್ಥವಾಗುತ್ತಿಲ್ಲ. ಏಕೆಂದರೆ ಮೊನ್ನೆ ನಡೆದ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಒಂದು ಸಾವಿರ ಚಿಲ್ಲರೆ ಪದವೀಧರರು ಚಲಾಯಿಸಿರುವ ಮತಗಳು ಕುಲಗೆಟ್ಟಿವೆಯಂತೆ. ಅದೂ ಎರಡೇ ಕ್ಷೇತ್ರಗಳಲ್ಲಿ.

ಇದು ಇಪ್ಪತ್ತನೆಯ ಶತಮಾನವೆಂದು ಅಂತರರಾಷ್ಟ್ರೀಯ ತಿಳುವಳಿಕೆಯಾದ್ದರಿಂದ ನಾವೂ ಒಪ್ಪಿಕೊಳ್ಳಬೇಕು. ಎಾದರೆ.........

ನಮಗೆ ಅಂತರರಾಷ್ಟ್ರೀಯ ನೆರವು ಎಷ್ಟರ ಮಟ್ಟಿಗಿದೆ ? 301 ಸೆಕ್ಷನ್‌ನಲ್ಲಿ ನಮ್ಮನ್ನು ಹುದಿ ಹಾಕಲು ಯಾಕೆ ಯತ್ನ ನಡೆಯುತ್ತಿದೆ ? ಪಂಜಾಬ್ ಕಾಶ್ಮೀರಗಳನ್ನು ಮರೆತಿದ್ದೇವೆಯೇ ?

ಇಪ್ಪತ್ತೊಂದನೆಯ ಶತಮಾನದಲ್ಲಿ ಕಂಪ್ಯೂಟರ್‌ಗಳೇ ಪುಸ್ತಕದ ಕೆಲಸ ಮಾಡುತ್ತವೆ ಎಂದಿಟ್ಟುಕೊಳ್ಳೋಣ.

ನಾವು ಕನ್ನಡಿಗರು ಬೇರೆ ಭಾಷೆಯ ಕಂಪ್ಯೂಟರನ್ನು ಓದಬೇಕೇ ? ಈಗಂತೂ ರಾಷ್ಟ್ರಗಳ ಛಿದ್ರೀಕರಣ ನಡೆಯುತ್ತಿದೆ. ನಾವೂ ಅದನ್ನನುಸರಿಸಬೇಕೆಂದು, ಅಥವಾ ಅನಿವಾರ್ಯವೆಂದುಕೊಳ್ಳಬೇಕು ಎಂದು ಕನ್ನಡದ ಉದ್ಧವಿಮರ್ಶಕರೊಬ್ಬರು ದಾವಣಗೆರೆಯ ಸಾಹಿತ್ಯ ಸಂವಾದವೊಂದರಲ್ಲಿ ಹೇಳಿದರು. ಪುಸ್ತಕಗಳನ್ನು ಓದಿಯೇ ಹಾಗೆ ಹೇಳಿರಬೇಕೆಂದರೆ ಪುಸ್ತಕಗಳು ಇಲ್ಲದಂತಾಗುವುದು ಒಂದು ತರಹ ಒಳ್ಳೆಯದೇ ಅಲ್ಲವೇ ?

ಬದಲಾಗುವ ಪರಿಸ್ಥಿತಿಗೆ ಅನುಸಾರವಾಗಿ ಬೆಳೆದು ಉಳಿದುಕೊಳ್ಳುವುದೇ ಪ್ರಬುದ್ಧತೆಯ ಚಿಹ್ನೆ ಎನ್ನುವುದಾದರೆ ಪರಿಸ್ಥಿತಿ ಹೇಗೆ ಬದಲಾಗುತ್ತದೆ ಎಂದು ನಾವು ಓದಿಯೆ ತಿಳಿದುಕೊಳ್ಳಬೇಕಲ್ಲವೇ ?

ಇಪ್ಪತ್ತೊಂದನೆಯ ಶತಮಾನದಲ್ಲಿ ಓದು ಅನಿವಾರ್ಯವೆಂದಾದರೆ......... ನಾವು ಬರೀ ಓದುವುದಷ್ಟೇ ಅಲ್ಲ ಅರ್ಥ ಮಾಡಿಕೊಳ್ಳುವುದೂ ಅನಿವಾರ್ಯ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಯಾವ ಶತಮಾನವಾದರೇನು, ಒಂದಲ್ಲದಿದ್ದರೆ ಇನ್ನೊಂದು ಫಜೀತಿ. ಇರಲೇಬೇಕಲ್ಲವೇ ?

ಇಪ್ಪತ್ತೊಂದನೆಯ ಶತಮಾನಕ್ಕೆ ನಮ್ಮನ್ನು ಸಜ್ಜುಗೊಳಿಸುವ ಮಾತೂ ಇದೆ. ಆದರೆ ವಾಸ್ತವವಾಗಿ ಆ ಸಜ್ಜು ಹೇಗಿರಬೇಕೆಂಬ ಕಲ್ಪನೆ ಯಾರಿಗೂ ಇಲ್ಲವೋ ನಮಗೇ ಇಲ್ಲವೋ ಹೇಳಲು ಬರುವುದೇ ?

ಮೇಲಿಂದ, ಎಂದರೆ ಅಧಿಕಾರದ ಸರ್ವೋಚ್ಚ ಸ್ತರದಿಂದ ಏತಕ್ಕೋ–ಎಂದರೆ ಲಾಭಕ್ಕೋ, ದಡ್ಡತನಕ್ಕೋ ಏನನ್ನೋ ಒಂದನ್ನು ಹೇರುತ್ತಾರೆ. ಅದರಿಂದ ಸದ್ಯಕ್ಕೆ ಲಾಭ ಹೊಂದುವವರು ಅದನ್ನು ಬೆಂಬಲಿಸುತ್ತಾರೆ. ಅದನ್ನು ನಾವು ತಲೆಯ ಮೇಲೆ ಕೊರೆಯುವ ಚಕ್ರವಾಗಿ ಒಪ್ಪಿಕೊಳ್ಳುತ್ತೇವೆ. ಬೇರೆ ಗತಿ ಇದೆಯೇ ?

ಆದರೆ ಕಾಲ ಇವರನ್ನೆಲ್ಲಾ ನುಂಗುತ್ತದೆ. ಉಳಿದವರು ಹಿಂಸೆ ಅನುಭವಿಸಬೇಕು. ಪುಸ್ತಕಗಳು, ಪತ್ರಿಕೆಗಳು ಕೊಟ್ಟದ್ದೇ ಜ್ಞಾನ ಎಂದು ಭಾವಿಸಬೇಕು ಎನ್ನುತ್ತೀರಾ ?

ಯಾರು ಸಜ್ಜಾಗಿದ್ದರೂ, ಇಲ್ಲದಿದ್ದರೂ ಇಪ್ಪತ್ತೊಂದನೆಯ ಶತಮಾನ ಬಂದೇ ಬರುತ್ತದೆ. ನಕಲೀ ಮಹಾಶಯರ ಜೀವನಗಳು ನಮಗೆ ಏನ್ನೊಂದನ್ನು ಕೊಡುವುದಿಲ್ಲ. ನಾವು ಕಷ್ಟಪಟ್ಟು ದುಡಿದ ಹಣವನ್ನು ಕಸಿಯುತ್ತವೆ.

Lives of greatmen all remind us
We Can make as much as they

ನಕ್ಕಾಂವಾ ಗೆದ್ದಾಂವಾ

"ಕಾಲಾಯ...."

ಶೀನೊ

ಬೆಳಿಗ್ಗೆ ನಾಷ್ಟಾ ಮುಗಿಸಿ ಆಫೀಸಿಗೆ ತೆರಳಲೆಂದು ಸಫಾರಿ ಧರಿಸಿ, ಬೂಟ್ಸು ಮೆಟ್ಟುತ್ತಿದ್ದೆ. ಆಗ ಗುಂದಮ್ಮ ಬಂದು "ನೋಡಿ ಅನಂತರಾಮು ಮನೆಯಲ್ಲಿ ಏನೋ ಆದ ಹಾಗಿದೆ. ಜನ ಹೋಗುತ್ತಿದ್ದಾರೆ" ಎಂದಳು. ನಾನು ಗಾಬರಿಯಲ್ಲಿ ಬೀದಿಗೆ ಬಂದು ಬೀದಿಯ ಕೊನೆಯಲ್ಲಿರುವ ಅನಂತರಾಮುವಿನ ಮನೆಯತ್ತ ನೋಡಿದೆ. ಒಬ್ಬಿಬ್ಬರು ನೆರೆಹೊರೆಯವರು ಅವನ ಮನೆಯಿಂದ ಬರುತ್ತಿದ್ದರು. ನಮ್ಮ ಗೇಟಿನ ಹತ್ತಿರ ಬರುತ್ತಿದ್ದ ಒಬ್ಬರನ್ನು ತಡೆದು "ಏನಾಗಿದೆ" ಎಂದು ಕೇಳಿದೆ. ಅವರು "ಪಾಪ!...ಬಂಗಾರದಂತಹ ಹುಡುಗಿ...ಹೀಗಾಗಬಾರದಿತ್ತು" ಎನ್ನುತ್ತ ಮುಂದೆ ನಡೆದರು.

ಏನಾಗಿದೆಯೋ ತಿಳಿಯದೇ ನಾನು ಗೊಂದಲಗೆಟ್ಟು, ಸಂದರ್ಭ ಹೇಗೂ ಇರಲೆಂದು ಬಟ್ಟೆ ಬದಲಾಯಿಸಿ ಅನಂತರಾಮುವಿನ ಮನೆಯ ಕಡೆ ಧಾವಿಸಿದೆ. ಗುಂಡಮ್ಮ ಹಿಂಬಾಲಿಸಿದಳು.

ಅನಂತರಾಮುವಿಗೂ ನನಗೂ ಒಂದೇ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ. ಅವನೂ ಅವನ ಕುಟುಂಬದವರೂ ನಮಗೆ ತುಂಬ ಬೇಕಾದವರು. ಕುಟುಂಬವೇನು ಬಂತು. ತ್ರಿಕೋಣೀ ಕುಟುಂಬ. ನಲವತ್ತೆಂಟರ ಪ್ರಾಯದ, ಸೆಕ್ಷನ್ ಹೆಡ್ಡು ಅನಂತರಾಮು ಕೀರುತಿಗೊಬ್ಬ ಮಗ ಎಂ. ಡಿ. ಮುಗಿಸಿ ಅಮೇರಿಕದಲ್ಲಿ ದುಡ್ಡು ಬಾಚಿಕೊಳ್ಳುತ್ತಿದ್ದಾನೆ. ಆರತಿಗೊಬ್ಬ ಮಗಳು ಜಲಜ ಈ ಸಲ ಪಿ. ಯು. ಸಿ. ಕಟ್ಟಿದ್ದಾಳೆ. ಅವನ ಹೆಂಡತಿ ಅಲಮೇಲು ಎಲ್ಲ ಗೃಹಿಣಿಯರಂತೆ ಅವರಿವರ ಮನೆ ಕಾರಭಾರು ಮಾಡುತ್ತ ಸುಖವಾಗಿ ಓಡಾಡಿಕೊಂಡಿದ್ದಾಳೆ. ಹೀಗೆ ಜಾಹೀರಾತಿನಂತಿರುವ ಸುಖೀ ಕುಟುಂಬಕ್ಕೆ ಏನು ತೊಂದರೆ ಬಂತಪ್ಪಾ ಎಂದು ಚಿಂತೆಯಲ್ಲಿ ನಡೆದಾಗ ಅವನ ಮನೆಯಿಂದಲೇ ಬರುತ್ತಿದ್ದ ಯಜಮಾನರೊಬ್ಬರು ನಮ್ಮನ್ನು ಕಂಡು "ಹೋಗಿ ಬನ್ನೀಪ್ಪಾ...ಪಾಪ!...ನಿಮ್ಮ ಸ್ನೇಹಿತರಲ್ಲವೇ...ಪಿ.ಯು.ಸಿ. ಹುಡುಗಿ ಹೀಗಾರಬಾರದಿತ್ತು... ಎಂದು ತುಂಡು ತುಂಡಾಗಿ ಮಾತನಾಡಿ ಮುಂದೆ ತೆರಳಿದರು. ನಾವು ತೀರ ಗೊಂದಲಗೆಟ್ಟು ಅಯ್ಯೋ–ಜಲಜ ಪಿ.ಯು.ಸಿ. ಫೇಲ್

ಆಗಿ ನೇಣು ಹಾಕಿಕೊಂಡಿದ್ದಾಳೋ, ಇಲ್ಲವೇ ಯಾವನೋ ತುರುಕನನ್ನು ಕಟ್ಟಿಕೊಂಡು ಓಡಿಹೋದಳೋ' ಯಾವುದೂ ತಿಳಿಯದೇ ಆತುರಾತುರದಲ್ಲಿ ಅನಂತರಾಮುನ ಮನೆ ಹೊಕ್ಕಾಗ. ಮನೆಯಲ್ಲೆಲ್ಲ ಏನೋ ದುಗುಡದ ವಾತಾವರಣವಿತ್ತು.

ಅನಂತು ಹಾಲಿನಲ್ಲಿ ಸೋಫಾದ ಮೇಲೆ ತಲೆಗೆ ಕೈಹೊತ್ತು ಕುಳಿತಿದ್ದ. ಅಲಮೇಲು ಒಳಬಾಗಿಲಿನ ಹೊಸ್ತಿಲಿಗೆ ತಾಗಿ ನಿಂತಿದ್ದಳು. ನಮ್ಮನ್ನು ನೋಡಿ ಗಂಡ ಹೆಂಡಿರು ಮುಖ ಕೆಳಕ್ಕೆ ಹಾಕಿ ಕಣ್ಣೊರೆಸಿಕೊಂಡರು.

ನಾನು ಅನಂತರಾಮುವಿನ ಪಕ್ಕದಲ್ಲಿ ಸರಿದು ಅವನ ಬೆನ್ನ ಮೇಲೆ ಕೈಯಿಟ್ಟು ನಿರ್ವಿಣ್ಣ ದನಿಯಲ್ಲಿ "ಏನಾಗಿದೆಯೋ.... ಎಂದು ಕೇಳಿದೆ.

ಅನಂತು ಒಮ್ಮೆಲೇ ಹಣೆ ಹಣೆ ಬಡಿದುಕೊಳ್ಳುತ್ತಾ 'ಮನೆ ಹಾಳು ಕೆಲಸ ಮಾಡಿಬಿಟ್ಟಳಪ್ಪss ...ಮನೆ ಹಾಳು ಕೆಲಸ.....ಇಂತಹ ಮಗಳು ಹುಟ್ಟದಿದ್ದರೇ ಸರಿ ಇತ್ತೇನೋ.... ನೆಂಟರಲ್ಲಿ ಮುಖ ಎತ್ತದಂತೆ ಮಾಡಿದಳು" ಎಂದು ಆಕ್ರೋಶಿಸಿದ.

ಗುಂಡಮ್ಮ ಅಲಮೇಲುವಿನ ಬಳಿ ಸಾರಿ "ಎಲ್ಲಿ ಜಲಜ? " ಎಂದು ಕೇಳಿದಳು.

"ಅವಳಿಗೇನು ಧಾಡಿ? ಅಲ್ಲಿಯೇ ರೂಮಿನಲ್ಲಿ ಬಿದ್ದುಕೊಂಡಿದ್ದಾಳೆ ನೋಡು' ಎಂದಳು ಅಲಮೇಲು ಆಕ್ಕಸತನದಲ್ಲಿ. ಜಲಜಳಿಗೆ ನಾವು ಗಾಬರಿಯಾದಂತೆ ಏನೂ ಆಗಿಲ್ಲವೆಂದು ತಿಳಿದು ಮನಸ್ಸಿಗೆ ಹಗೂರಾಯಿತು. ನನ್ನ ಹೆಂಡತಿ ಜಲಜಳ ಕೋಣೆಗೆ ನಡೆದಳು.

ನಾನು "ಆಗಿದ್ದಾದರೂ ಏನು ಹೇಳೋ" ಎಂದೆ ಅನಂತೂಗೆ "ಮನೆ ಹಾಳು....ಮನೆ ಹಾಳು ಮೂಳಿ....ನೆಂಟರಲ್ಲಿ ಮಾನ ತೆಗೆದಳು" ಎಂದು ಏನೇನೋ ಒಟಗುಟ್ಟುತ್ತ.... "ಐವತ್ತು ಪಿ.ಯು.ಸಿ. ರಿಸಲ್ಟ ಬಂದಿದೆ ನೋಡಿದೆಯೊ" ಎಂದ.

ನಾನು "ಅಯ್ಯೊ ಪಿ.ಯು.ಸಿ. fail ಆಗಿದ್ದಾಳೆ ತಾನೆ? ಅದಕ್ಕ್ಯಾಕೋ ಅಷ್ಟೊಂದು ಬಯ್ಯುತ್ತೀಯಾ ಆ ಮಗುವಿಗೆ.... ಎನ್ನುತ್ತಿದ್ದಂತೆಯೇ ನನ್ನ ಮಾತನ್ನು ಅರ್ಧಕ್ಕೆ ತುಂಡಸಿರಿ "ಫೇಲಂತೆ ಫೇಲು.... ಫೇಲಾಗಿದ್ದರೆ ಎಷ್ಟೋ ಒಳ್ಳೆಯದಿತ್ತೋ....ಇನ್ನೊಮ್ಮೆ ಕಟ್ಟಬಹುದಿತ್ತು. ಪಾಸಾಗಿ ಈ ಅವಸ್ಥೆ ತಂದುಕೊಂಡಳೋ....ಹಾಳಾದವಳು.... ಎಂದು ಚೀರಿದ.

"ಏನೋ ಹಾಗೆಂದರೆ, ಫಸ್ಟ್‌ಕ್ಲಾಸ್ ಬರಲಿಲ್ಲವೇ ?" ಎಂದೆ.

ಅನಂತರಾಮು ಅಸಹನೆಯಲ್ಲಿ "ನಿನ್ನ ಕರ್ಮ....ಫಸ್ಟ್‌ಕ್ಲಾಸೂ ಬಂದಿದ್ದಾಳೆ, ಡಿಸ್ಟಿಂಕ್ಶನ್ನೂ ತೆಗೆದಿದ್ದಾಳೋ, ಆದರೆ ಒಂದು ಎಂ.ಬಿ.ಬಿ.ಎಸ್.... ಒಂದು ಇಂಜಿನಿಯರಿಂಗ್.....ಯಾವದಕ್ಕೂ ಸೀಟು ಸಿಕ್ಕದ ಹಾಗೆ ದರಿದ್ರದ ಜುಜುಬಿ, ತೊಂಭತ್ತೈದು ಪರ್‌ಸೆಂಟು ಮಾರ್ಕ ತೆಗೆದಿದ್ದಾಳೆ. ನೀನೆ ಹೇಳು ಏನು ಮಾಡಲಿ? ಎಲ್ಲಿ ಹೋಗಲಿ ? ಈ ಕಳವೆ ನ್ಯಾಂಟಿಫ್ಯಾವ್ ಪರ್‌ಸೆಂಟ ಸ್ಕೋರಿಂಗಿಗೆ, ಎಂ.ಬಿ.ಬಿ. ಎಸ್. ಬಿಡು. ಕಂಪ್ಯೂಟರ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್, ಇಲೆಕ್ಟ್ರಿಕಲ್ ಮೆಕ್ಯಾನಿಕಲ್, ಟೆಕ್ಸ್‌ಟಾಯಿಲ್ ಹೋಗಲಿ ಕೊನೆಗೆ ಆ ಗೌಂಡಿಗಳ ಸಿವ್ಹಿಲ್ ಇಂಜಿನಿಯರಿಂಗ್ ಕೂಡ ಸಿಕ್ಕಲ್ಲವೋ ಹಾಳಾದ್ದು" ಎಂದು ಗೋಗರೆದ. ಕ್ಷಣಬಿಟ್ಟು ಮತ್ತೆ ಅಸಹನೆಯಿಂದ "ಸುಡುಗಾಡು, ಮ್ಯೆಕ್ರೊ ಬಾಯೋಲಜಿಕಲ್ ಇಂಜಿನಿಯರಿಂಗ್ ಕೂಡ 96.8 ಪರ್ಸೆಂಟಿಗೆ ನಿಂತಿದೆ. ಇನ್ನೊಂದೆರಡು ಪರ್ಸೆಂಟು ಮಾರ್ಕ್ಸ್ ತೆಗೆದಿದ್ದರೆ ಇವಳೇನು ಸಾಯುತ್ತಿದ್ದಳೇ" ಎಂದು ಹಣೆ ಚಚ್ಚಿಕೊಂಡ.

ಈಗ ನಾನು ನಿಜಕ್ಕೂ ಕಂಗೆಟ್ಟೆ. ಈ ಇಂಜನಿಯರಿಂಗ್ ಕೋರ್ಸುಗಳೇನು ? ಅವಕ್ಕೆ ಪ್ರವೇಶ ದೊರಕಿಸಲು ಕನಿಷ್ಟ ಎಷ್ಟೆಷ್ಟು ಪ್ರತಿಶತ ಮಾರ್ಕು ತೆಗೆಯಬೇಕು. ಯಾವದೂ ತಿಳಿಯದ ಬೆಪ್ಪ ನಾನು. ಅದರಲ್ಲಿ ಕಂಪ್ಯೂಟರ್ ಇಂಜಿನಿಯರ್ ಅಂದರೆ ಏನು ? ಮ್ಯೆಕ್ರೊ ಬಾಯೋಲಜಿ ಎಂದರೆ ಏನು ತಲೆ ನನಗೆ ಯಾವದೂ ಅರ್ಥವಾಗದು. ಅಷ್ಟಲ್ಲದೇ ಯಾರಾದರೂ ಈ "ಮ್ಯೆಕ್ರೊ ಶಬ್ದ ಉಪಯೋಗಿಸಿ ಬಿಟ್ಟರೆ ನನಗೆ ಜ್ವರ ಜರುತ್ತದೆ, ಮ್ಯೆಕ್ರೊ 'ಮ್ಯಾಕ್ರೊ 'ಸುಪ್ರಾ 'ಇನ್‌ಬಿಲ್ಟ' 'ಸಿನಾರಿಯೊ' 'ಹಾಯರಾರ್ಕಿ 'ಕಮಿಟ್‌ಮೆಂಟ್' ಇತ್ಯಾದಿ ಆಧುನಿಕ ಮ್ಯಾನೇಜಮೆಂಟಿನ ಬಳಕೆಗಳನ್ನು ಕೇಳಿದರೆ ಪಿತ್ತ ಕೆರಳುತ್ತದೆ. ಯಾರಾದರೂ 'ಮ್ಯೆಕ್ರೊ ಎಂದ ಮೇಲೆ 'ಮ್ಯಾಕ್ರೊ ಶಬ್ದ ಬಂದು ಹೋಗುವವರೆಗೆ ಟೆನ್ಶನ್ ಇರುತ್ತದೆ. ಯಾವದೇ ಭಾಷಣದಲ್ಲಾಗಲೀ, ಮೀಟಿಂಗಿನಲ್ಲಾಗಲೀ, ಆಫೀಸಿನ ಕಾಗದ ಪತ್ರಗಳಲ್ಲಾಗಲೀ "ಮ್ಯೆಕ್ರೊ" ಬಂದು ಬಿಟ್ಟರೆ "ಮ್ಯಾಕ್ರೊ ಬರುವವರೆಗೆ ಬೇಚೈನಿಯಿಂದ ಕಾಯುತ್ತಿರುತ್ತೇನೆ.

ಹಾಗಾಗಿ ಒಮ್ಮೆ ಈ ಸಸ್ಪೆನ್ಸ್ ಮುಗಿದರೆ ಸಾಕೆಂದು ನಾನೇ ಅನಂತರಾಮುಗೆ "ಮ್ಯೆಕ್ರೊ ಬಾಯೋಲಜಿಗೆ ಸೀಟು ಸಿಕ್ಕದಿದ್ದರೆ ಹೋಗಲಿ "ಮ್ಯಾಕ್ರೊ ಬಾಯೋಲಜಿಗೆ ಸಿಕ್ಕಬಹುದಲ್ಲ" ಎಂದು ಸಹಜವಾಗಿ ಕೇಳಿಬಿಟ್ಟೆ. ಅನಂತು ನನ್ನನ್ನು ಸುಟ್ಟುಬಿಡುವವನಂತೆ ನೋಡಿದ. ನಾನು ಪೆಚ್ಚು ಪೆಚ್ಚಾಗಿ ನಕ್ಕೆ ಎಂದಿನಂತೆ. ಈಗ ಆಲಮೇಲು–ಅನಂತರಾಮುವಿನ ಹೆಂಡತಿ. ನಮ್ಮ ಮಧ್ಯೆ ತಲೆ ತೂರಿ "ನೀವೇ ಹೇಳಿ ಈಗಿನ ಕಾಲಕ್ಕೆ ಒಂದು ಡಾಕ್ಟರೋ ಇಂಜಿನಿಯರೋ ಆಗದಿದ್ದರೆ ಯಾರು ಕೇಳುತ್ತಾರೆ" ಎಂದೊರಲಿದಳು.

ಅನಂತರಾಮು ಮತ್ತೆ ಅಸಹನೆಯಲ್ಲಿ "ಆಗ್ತಾಳೆ....ಆಗ್ತಾಳೆ. ಇಂಜಿನಿಯರ್ ಆಗ್ತಾಳೆ. ನಿನ್ನ ಮಗಳ ಕಳಪೆ ನ್ಯಾಂಟಿಫ್ಯಾವ್ ಪರ್ಸೆಂಟಿಗೆ ಯಾವದಾದರೂ ಮುಸರೆ ಕೆಲಸದವರ ಆರ್ಟ್ಸ್ ಕಾಲೇಜಿಗಾದರೂ ಸೀಟು ಸಿಕ್ಕುತ್ತೇನೋ ನೋಡು" ಎಂದು ಹರಿಹಾಯ್ದ.

ಅಂತೂ ನಾನೂ ಗುಂಡಮ್ಮನೂ ಗಂಡಹೆಂದಿರನ್ನು ಸಂತೈಸಿ, ಪಾಪ ಜಲಜ ಇಲ್ಲಿಯೇ ಇದ್ದರೆ ಇನ್ನೂ ನೊಂದುಕೊಳ್ಳುತ್ತಾಳೆಂದು ಅವಳನ್ನು ನಮ್ಮ ಮನೆಗೆ ಕರೆದುಕೊಂಡು ನಡೆದವು.

ಬೀದಿಯುದ್ದಕ್ಕೂ ನಿಂತ ಅಕ್ಕಪಕ್ಕದ ಜನ ಪಿ.ಯು.ಸಿ.ಯಲ್ಲಿ ನ್ಯಾಂಟಿಫ್ಯಾವ್ ಪರ್ಸೆಂಟು ಮಾರ್ಕು ತೆಗೆದು ಫೇಲಾದ ಈ ಅಭಾಗಿನಿಯ ಕಡೆಗೆ ಕರುಣೆಯಿಂದ ನೋಡಿ ನಿಟ್ಟುಸಿರಿಡುತ್ತಿದ್ದರು.

ನನಗೆ ಅದೇಕೋ ಇದ್ದಕ್ಕಿದ್ದಂತೆ ಮೂವತ್ತು ನಲವತ್ತು ವರುಷಗಳ ಹಿಂದಿನ ನಮ್ಮ ಕಾಲೇಜಿನ ದಿನಗಳ ನೆನಪು ನುಗ್ಗಿ ಬಂತು.

ಮಿಡೀವಲ್ ಹಿಸ್ಟರಿ ತಕ್ಕೊಂಡು ಎರಡು ಸಲ ಫೇಲಾಗಿ ಮೂರನೇ ಸಲಕ್ಕೆ ಬಿ. ಎ. ಮುಗಿಸಿದಾಗ ನಮ್ಮ ತಂದೆ ಸಂತಸದಿಂದ ಊರಿಗೆಲ್ಲ ಸಿಹಿ ಹಂಚಿದ್ದರು. ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿಸಿದ್ದರು. ಅಂದೆಲ್ಲ ನಮ್ಮ ತಾಯಿ ಮತ್ತೆ ಮತ್ತೆ ನನ್ನ ತಲೆಗೂದಲಲ್ಲೆಲ್ಲ ಬೆರಳಾಡಿಸುತ್ತಾ "ನನ್ನ ಮಗ ಮಾಮಲೇದಾರ ಆಗ್ತಾನೆ" ಎಂದು ಹರಸಿದ್ದರು. ಆ ದಿನಗಳ ಓದು ಎಷ್ಟೊಂದು ಸಂತೋಷದಾಯಕವಾಗಿತ್ತು ! ಮುಖ್ಯ ವಿಷಯ ಮಿಡೀವಲ್ ಐತಿಹಾಸವೇ ಇದ್ದರೂ ಜತೆಗೆ ಸ್ವಲ್ಪ ಶೇಕ್ಸಪಿಯರನ್ನೂ ಶೆಲ್ಲಿ ಬ್ರೌನಿಂಗರನ್ನೂ ಸವಿಯುತ್ತಿದ್ದೆವು. ನಂಚಿಕೊಳ್ಳುವದಕ್ಕೆ ಕಾಳಿದಾಸನ ಶಾಕುಂತಲವೋ ಭಾಸನ ಉತ್ತರರಾಮ ಚರಿತ್ರವೋ ಇದ್ದೇ ಇರುತ್ತಿತ್ತು. ನಾಲದ್ದಕ್ಕೆ ಕಾಲೇಜಿನ ಉದ್ದಕ್ಕೂ ಕುಮಾರವ್ಯಾಸನೋ. ಪಂಪರನ್ನರೋ, ಮುದ್ದಣ ಹರಿಹರರೋ ಒಬ್ಬಿಲ್ಲೊಬ್ಬರು ಐಚ್ಛಿಕವಾಗಿಯೋ ಅನೈಚ್ಛಿಕವಾಗಿಯೋ ಕಂಪನಿ ಕೊಟ್ಟೇಕೊಡುತ್ತಿದ್ದರು. ವಾರ್ಷಿಕೋತ್ಸವ. ನಾಡಹಬ್ಬಗಳಿಗೆಂದು ಪುಟ್ಟಪ್ಪ, ಬೇಂದ್ರೆಯವರನ್ನೊ, ಗೋಕಾಕ ಕಾರಂತರನ್ನೂ ಆಮಂತ್ರಿಸಿ ಅವರ ವಿದ್ವತ್ಪೂರ್ಣ ವಾಗ್ಝರಿಯಲ್ಲಿ ಮಿಂದು ಪುನೀತರಾಗುವ ಸದವಕಾಶಗಳನ್ನು ಕಲ್ಪಿಸುತ್ತಿದ್ದರು. ರಜೆಯ ದಿನಗಳಲ್ಲಿ ಗುಬ್ಬಿ ವೀರಣ್ಣನವರ ನಾಟಕಗಳನ್ನೂ ಸೈಗಲ್ ಚಿತ್ರಗಳನ್ನೂ ನೋಡಿ ನಲಿಯುತ್ತಿದ್ದೆವು. ಮಹಾ ಮಾನಿನಿ ಮರ್ಲಿನ್ ಮನ್ರೋಳ ಅದ್ಭುತ ಅಂಗಸೌಷ್ಟವಕ್ಕೆ ಕೌತುಕಪಡುತ್ತ ದೊಡ್ಡವರಾದೆವು.

ಅಂದಿನ ದಿನಗಳು ಉದ್ವೇಗ ರಹಿತವಾದ ನಿರಾಂತಕವಾದ ದಿನಗಳು. ನಿರಭ್ರ ನೀಲಾಗಸದಲ್ಲಿ ಸೋಮಾರಿ ಸೂರ್ಯ ಗುರಿಯಿಲ್ಲದೇ ಅಲೆದಲೆದು ದಿನ ದೂಡುತ್ತಿದ್ದ. ಮುಸುರೆ ಕೆಲಸದವರ ಕಳವೆ ಬಿ. ಎ. ಡಿಗ್ರಿಗೇನೇ ಆ ದೇವದೇವನ ಇನ್‌ಫ್ಲೂಯೆನ್ಸ್‌ನಲ್ಲಿ ಒಂದು ಒಳ್ಳೆ ಕೆಲಸ ಸಿಕ್ಕಿ ಬದುಕಿಗೊಂದು ಆಸರೆಯಾಯಿತು. ಮುಂದೆ ನನಗೆಂದೇ ಹೇಳಿ ಮಾಡಿಸಿದ ಚಲುವೆ ಗುಂಡಮ್ಮ ನನ್ನ ಕೈಹಿಡಿದು ನನ್ನ ಬಾಳರಥವನ್ನು ಇನ್ನಿಲ್ಲದ ಚತುರತೆಯಿಂದ ಇಲ್ಲಿಯವರೆಗೆ ಸಾಗಿಸಿಕೊಂಡು ಬಂದಿದ್ದಾಳೆ. ಮುಂದೆಯೂ ಕೂಡ ಆ ದಯಾಘನನ ಕೃಪೆಯಿಂದ ಸಂತೋಷವಾಗಿಯೇ ಬದುಕುವೆವೆಂಬ ಆತ್ಮವಿಶ್ವಾಸವಿದೆ. ಹಾಗೆಂದ ಮಾತ್ರಕ್ಕೆ ಜೀವನದುದ್ದಕೂ ಹೂವಿನ ಹಾಸಿಗೆಯಿತ್ತೆಂದಲ್ಲ. ಅಲ್ಲಲ್ಲಿ ಸಾಕಷ್ಟು ನೋವುಂಡಿದ್ದೇವೆ. ಆದರೆ ಅದೆಲ್ಲ ಆ ನಿಯಾಮಕನ ಹಸಾದವೇ ಎಂದು ತಿಳಿಯುವ ಮುಗ್ಧತೆಯನ್ನೂ ಶ್ರದ್ಧೆಯನ್ನೂ ಅವನೇ ಕರುಣಿಸಿದ್ದಾನೆ. ಅಂತೂ ಸುಖವಾಗಿದ್ದೇವೆ. ಹಾಗೆ ನೋಡಿದರೆ ನಾನು ಮಿಡೀವಲ್ ಹಿಸ್ಟರಿಯಲ್ಲಿ ಇಂಜಿನಿಯರ್, ಗುಂಡಮ್ಮ ಹುಳಿ ಅನ್ನ ಮಾಡುವ ಇಂಜಿನಿಯರ್.

ಪಾಠಶಾಲೆಯ ಮುಂದಿನ ರಸ್ತೆಯಲ್ಲೊಂದು ಬೋರ್ಡನ್ನ ಲಯನ್ಸ್ ಕ್ಲಬ್ಬಿನವರು ಹೊಸದಾಗಿ ಬರೆಸಿ ಹಾಕಿದ್ದರು.

"ಎಚ್ಚರಿಕೆ. ಶಾಲೆಯ ಆವರಣ. ಮಕ್ಕಳಿಗೆ ಅಪಘಾತ ಮಾಡಬೇಡಿ"

ತುಂಟ ಪುಟ್ಟು ಆದರ ಕೆಳಗೆ ಚಾಕ್‌ಪೀಸ್‌ನಲ್ಲಿ ಈ ರೀತಿ ಬರೆದ.

"ಟೀಚರ್ಸ್ ಬರುವವರೆಗೂ ಕಾಯಿರಿ"

ಬಿ. ನಂಜುಂಡಯ್ಯ

ಉದಾರ ಮನಸ್ಸಿನಿಂದ ಉಗಾದಿ ಸಂಚಿಕೆಗೆ ಜಾಹಿರಾತುಗಳನ್ನು ನೀಡಿದ ಈ ಕೆಳಗಿನ ವ್ಯಕ್ತಿ / ಸಂಸ್ಥೆಗಳನ್ನು "ಅಪರಂಜಿ" ಕೃತಜ್ಞತೆಯಿಂದ ನೆನೆಯುತ್ತಾಳೆ

1 ಮೆಟಲ್ ಪವರ್ (ಇಂಡಿಯಾ) ಪ್ರೈ. ಲಿಮಿಟೆಡ್
2 ಮೆಷಿನ್ ಎಲಿಮೆಂಟ್ಸ್
3 ಪ್ರಿಸಿಷನ್ ಪ್ರಾಡಕ್ಟ್ಸ್
4 ಪಿ.ಜಿ.ಕೆ. ಅಸೋಸಿಯೇಟ್ಸ್
5 ರೋಲ್‌ಮನ್ ಟ್ರೇಡಿಂಗ್ ಕಂಪನಿ
6 ಜಾಯ್ ಇಂಡಸ್ಟ್ರೀಸ್
7 ಶೇಷಾದ್ರಿ ಅಂಡ್ ಕಂಪನಿ
8 ಸಿ. ಗುರುಸಿದ್ದಪ್ಪ ಅಂಡ್ ಸನ್ಸ್
9 ದಿ ಮೈಸೂರ್ ಕನ್‌ಸ್ಟ್ರಕ್ಷನ್ ಕಂಪನಿ
10 ಆರ್. ವಿ. ಅಪಾರ್ಟ್‌ಮೆಂಟ್ಸ್
11 ಕೇಲಚಂದ್ರ ಮೆಷೀನ್ಸ್
12 ಕೆ. ಎನ್. ರಂಗಸ್ವಾಮಿ
13 ಎನ್. ವೆಂಕೋಬರಾವ್
14 ಯಕ್ಷ ದೇಗುಲ
15 ಫೈನ್ ಕ್ರಾಫ್ಟ್ಸ್
16 ಶ್ರೀಮತಿ ಸುಧಾ ರಾಮಕೃಷ್ಣ
17 ಶ್ರೀ ಎಚ್. ಆರ್. ಶ್ರೀನಿವಾಸ್
18 ಶ್ರೀ ತಲ್ಲಂ ವೆಂಕಟೇಶ್
19 ಎನ್. ಎನ್. ಗಿರಿಮಾಜಿ ಅಂಡ್ ಸನ್ಸ್
20 ಶ್ರೀ ಕೆ. ಟಿ. ನಾರಾಯಣ್ ಮತ್ತು ಶ್ರೀಮತಿ ಪ್ರಫುಲ್ಲ
21 ಸೀಲಿನ್ ಇಂಡಸ್ಟ್ರೀಸ್
22 ಲಯನ್ ಪಿ. ಎಸ್. ಪ್ರೇಮನಾಥ್
23 ಮಾರ್ಬೆಲ್ಲೋ
24 ಎಸ್.ವಿ.ಆರ್ ಏಜನ್ಸೀಸ್
25 ರವಿ ಗ್ರಾಫಿಕ್ಸ್
26 ಕರ್ನಾಟಕ ಇನ್ಸೆಕ್ಟಿಸೈಡ್ಸ್ ಅಂಡ್ ಫಂಗಿಸೈಡ್ಸ್
27 ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್
28 ಯು. ಐ ಪ್ಲಾಸ್ಟ್ ಪ್ರೈ. ಲಿಮಿಟೆಡ್

REGISTERED No. BGW - 180

Printed by V R NATH for the Publisher M SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVA KUMAR